ಅಪರಂಜಿ

ಜೂನ್ 2001

ತಿಳಿನಗೆಯ ಕಾರಂಜಿ



ಪ್ರಕಾಶ್

ಅಣ್ಣಾಸ್ವಾಮಿ ಮೊದಲಿಯಾರ್

ಶ್ಯಾಮಲ ರವಿಶಂಕರ್

ಬಿ.ಆರ್. ನಾಗೇಶ್

ಶಿವು

ನೀರಗುಂದ ಕೇಶವಮೂರ್ತಿರಾವ್

ವಿಜಯರಾಜಸುತ

ಎಂ.ಎನ್. ಜಯಕೇಸರಿ

ಎಂ.ಎನ್.ಕೆ.

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್


ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 18 ಜೂನ್ - 2001 ಸಂಚಿಕೆ -9

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27





○ ಪ್ರಕಾಶ್

ಪುಸ್ತಕ ತೆರಿಗೆ: ಉಭಯ ಸದನಗಳಲ್ಲಿ ವಿರೋಧ

- ಪತ್ರಿಕೆ

ಪಾಸ್ ಬುಕ್, ಚೆಕ್‌ಬುಕ್ ಮಾತ್ರ ಓದೋರೂ ವಿರೋಧಿಸಿದರೆ?!

★★★

ತೃಣಮೂಲ ಜತೆ ಚುನಾವಣಾ ಮೈತ್ರಿ: ಕಾಂಗ್ರೆಸ್ ನಿರ್ಧಾರ

- ಪತ್ರಿಕೆ

ತೇನ ವಿನಾ....!!

★★★

ಬಿಯರ್ ಮಾರಾಟ; ತೀವ್ರ ಪ್ರತಿಭಟನೆ

- ಸುದ್ದಿ

ಗಲಾಟೆ ಮಾಡಿದವರೆಲ್ಲ ಸಂಜೆ ಏನು ಮಾಡಿದರು ಅಂತ ವಿವರ ಗೊತ್ತಿಲ್ಲ!!

★★★

ಬಸ್ ಮೇಲೆ ಕುಳಿತವರೂ ಟಿಕೆಟ್ ಪಡೆಯಬೇಕು

- ಸಾರಿಗೆ ಸಚಿವರು

ಸಾಧಾರಣ ಟಿಕೆಟ್‌ಗಿಂತ ರಿಯಾಯಿತಿ ಉಂಟೋ??

★★★

'ಹಿಂದು'ಜಾ ಸಹೋದರರು ಭಾರತ ಬಿಡುವಂತಿಲ್ಲ

- ಸುದ್ದಿ

ಈ ತನಿಖೆ 'ಮುಂದು'ವರಿಯುತ್ತಿಲ್ಲ!!

★★★

ರಕ್ಷಣಾ ಉತ್ಪಾದನೆ ಖಾಸಗಿ ವಲಯಕ್ಕೆ

- ಸುದ್ದಿ

ಟೆಹೆಲ್ಕಾದವರಿಗೆ ಇನ್ನು ಕೆಲಸವಿಲ್ಲ!?

★★★

ಅಂತರ ರಾಷ್ಟ್ರೀಯ ಕಾಫಿ ಒಪ್ಪಂದಕ್ಕೆ ಅಂಗೀಕಾರ

- ಪತ್ರಿಕೆ

ಕೊಡಗಿನಲ್ಲಿ ತಣ್ಣ ವಾತಾವರಣದಲ್ಲೂ ತಲೆ ಬಿಸಿಯಾಯಿತಂತೆ!

★★★

ಪಾಕ್ ಜತೆ ಬಾಂಧವ್ಯ - ವಾಜಪೇಯೀ ಆಶಯ

- ಸುದ್ದಿ

ಪಂಡಿತ್ ನೆಹರು ನಸುನಕ್ಕರಂತೆ

★★★

ಸಂಪುಟ ಪುನರ್ರಚನೆ; ನಾನು ಟೆಂಡೂಲ್ಕರ್ ತರಹ ಬ್ಯಾಟ್ ಮಾಡಲು ಆಗದು

- ಮಾನ್ಯ ಮುಖ್ಯಮಂತ್ರಿಗಳು

ಹೌದು, ಲೆಗ್ ಬಿಫೋರ್ ಆದರೆ ಕಷ್ಟ!!

★★★

ಮರಾಠಿ ನಾಮಫಲಕ ತೆಗೆಸಲು ವಾಟಾಳ್ ಆಗ್ರಹ

- ಪತ್ರಿಕೆ

"ಅಗ್ದಿ ಬರೋಬ್ಬರ್!!"

★★★

ದೀಪಾವಳಿ ಕರಿ

– ಅಣ್ಣಾಸ್ವಾಮಿ ಮೊದಲಿಯಾರ್

ನಾನು, ಅಬ್ಬೂರು ಸುಬ್ಬಣ್ಣ ಮತ್ತು ಭೀಮಾಚಾರಿ ಒಂದೇ ಷಿಫ್ಟ್‌ನಲ್ಲಿದ್ದೆವು. ರಾತ್ರಿಷಿಫ್ಟ್ ಬಂದಾಗ ನಾವು ಮೂವರೂ ಒಟ್ಟಿಗೇ ಇರುತ್ತಿದ್ದೆವು. ನನಗೆ ಅಯ್ಯಂಗಾರ್ ಮನೆ ಪುಳಿಯೋಗರೆ, ಸಿಹಿಪೊಂಗಲ್ ಅಂದರೆ ಇಷ್ಟ. ಮಾಧ್ವರ ಮನೆ ಬಿಸಿಬೇಳೆಬಾತ್, ಹಯಗ್ರೀವ ಅಂದರೆ ಪಂಚಪ್ರಾಣ. ಭೀಮಾಚಾರಿ ಮತ್ತು ಸುಬ್ಬಣ್ಣ ನಮ್ಮ ಕಂಪೆನಿ ಹತ್ತಿರದಲ್ಲಿಯೇ ರೂಂ ಮಾಡಿಕೊಂಡಿದ್ದರು ಸ್ವಯಂ ಪಾಕಬೇರೆ. ರಾತ್ರಿ ಷಿಫ್ಟ್ ಬಂದರೆ ದೊಡ್ಡ ಊಟದ ಕ್ಯಾರಿಯರ್‌ನಲ್ಲಿ ಹೋಳಿಗೆ ತುಪ್ಪ, ಬಿಸಿಬೇಳೆ ಬಾತ್, ಒಂದೊಂದು ದಿನ ಹಯಗ್ರೀವ ತರುತ್ತಿದ್ದರು. ರಾತ್ರಿ ಹತ್ತು ಗಂಟೆಗೆ ಕಂಪೆನಿಯ ಟೆರೇಸ್ ಗಾರ್ಡನ್‌ಗೆ ಹೋಗಿ ಬೆಳದಿಂಗಳೂಟ ಮಾಡುತ್ತಿದ್ದೆವು - ಚಂದ್ರನಿಲ್ಲದಿದ್ದರೆ ನಕ್ಷತ್ರ ಬೆಳಕಿನ ಊಟ ನಡೆಯುತ್ತಿತ್ತು. ಪೊಗದಸ್ತಾಗಿ ತಿಂದು ಕರಿದ ತಿಂಡಿಗಳನ್ನು ತಿನ್ನುತ್ತಾ ಹರಟೆ ಹೊಡೆಯುತ್ತಿದ್ದೆವು.

ನಮ್ಮ ಹರಟೆಯಲ್ಲಿ ಕ್ರಿಕೆಟ್, ಸಿನಿಮಾ, ಸಾಹಿತ್ಯ, ರಾಜಕೀಯ, ಹೀಗೆ ಒಂದೇ ಎರಡೇ, ಜೊತೆಗೆ ನಮ್ಮ ಅನುಭವಗಳು ಹೀಗೆ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು.

ಸುಬ್ಬಣ್ಣ ಹಿಂದೂ ಪರಿಷತ್ ಕಾರ್ಯಕರ್ತ. ಜಗತ್ತಿನಲ್ಲಿ ಹಿಂದೂಗಳನ್ನು, ಹಿಂದೂ ಮತವನ್ನು ಬಿಟ್ಟರೆ ಬೇರೆ ಮತಗಳೆಲ್ಲಾ ಜನರನ್ನ ನರಕದ ಕಡೆಗೆ ನಡೆಸುತ್ತಿದೆ ಎಂಬುದು ಅವನ ವಾದ. ಮಠಾಧಿಪತಿಗಳ ಬಗ್ಗೆ, ಆಚಾರಗಳ ಬಗ್ಗೆ ಅಧಮ್ಯ ಶ್ರದ್ದೆ, ಆರ್.ಎಸ್.ಎಸ್. ಬಗ್ಗೆ ನಿಷ್ಠೆ. ನಾವು ಬೇಕೆಂದೇ ಹಿಂದೂ ಮತವನ್ನು ಹೀಯಾಳಿಸಿಯೋ, ಮಠಾಧಿಪತಿಗಳನ್ನು ಬೈದೋ, ಆರ್.ಎಸ್.ಎಸ್. ಬಗ್ಗೆ ಟೀಕೆ ಮಾಡಿಯೋ ಅವನನ್ನು ರೇಗಿಸಿ ಮಜಾ ತೆಗೆದುಕೊಳ್ಳುತ್ತಿದ್ದೆವು.

ಭೀಮಾಚಾರಿ ಮಾಸ್ಟರ್ ಆಫ್ ಆಲ್ ಸಿನಿಮಾ ವಿಷಯ ತೆಗೆದರೆ ಗುರುದತ್ ಪ್ಯಾಸಾದಲ್ಲಿ ಮಾಡಿದ ಆಕ್ಟಿಂಗ್ ಬಗ್ಗೆಯೋ ಜಾಗತೆ ರಹೋದಲ್ಲಿ ರಾಜಕಪೂರನ ಆಕ್ಟಿಂಗ್ ಬಗ್ಗೆಯೋ, ಇಲ್ಲವೇ ರಾಜಕಪೂರ್ ನರ್ಗೀಸ್ ಪ್ರೇಮ ಪ್ರಕರಣಗಳು, ಬೈಜೂ ಬಾವ್ರಾ ಸಿನಿಮಾ ಕಥೆ ಹೀಗೆ ಕೊನೆಯಿಲ್ಲದೆ ಮಾತನಾಡುತ್ತಿದ್ದ. ಕ್ರಿಕೆಟ್ ತೆಗೆದುಕೊಂಡರೆ, ಪಟೌಡಿ ಸೆಂಚುರಿ ಬಗ್ಗೆ, ಜಿ.ಆರ್. ವಿಶ್ವನಾಥ ಬ್ಯಾಟಿಂಗ್ ಬಗ್ಗೆ, ಎಲ್.ಟಿ. ಸುಬ್ಬು, ಕಸ್ತೂರಿ ರಂಗನ್, ತಮ್ಹಾನೆ,

ರಾಮಚಂದ್ರ, ಜಯಸಿಂಹ, ವೊರೆಲ್, ಪೊಲಾಕ್, ಸೋಬರ್ಸ್, ಬ್ರಾಡ್‌ಮನ್ ಹೀಗೆ ಕ್ರಿಕೆಟ್ ಇತಿಹಾಸವನ್ನೇ ತೆಗೆದಿಡುತ್ತಿದ್ದ.

ಸಿನಿಮಾ ಹಾಡುಗಳ ಬಗ್ಗೆ ಮಾತು ಬಂದರೆ ಭಾವುಕನಾಗುತ್ತಿದ್ದ. ನಾವು ಪುಸಲಾಯಿಸಿದರೆ, ಸುಶ್ರಾವ್ಯವಾಗಿ ಹಾಡುತ್ತಿದ್ದ. ದೇವರು ಅವನಿಗೆ ಒಳ್ಳೆಯ ಸಂಗೀತ ಜ್ಞಾನ, ಸುಂದರ ಕಂಠ ಕೊಟ್ಟಿದ್ದ. ನಾವು ಅವನ ಹಾಡಿನಲ್ಲಿ ತಲ್ಲೀನರಾಗುತ್ತಿದ್ದೆವು. ಕನ್ನಡ ನಾಟಕ ರಂಗದ ಬಗ್ಗೆ ವರದಾಚಾರ್ಯರು, ಹಿರಣ್ಣಯ್ಯ ಫಿರ್‌ಸಾಬ್, ಸುಬ್ಬಯ್ಯನಾಯ್ಡು, ಗುಬ್ಬಿ ವೀರಣ್ಣ ಮೊದಲಾದವರ ಬಗ್ಗೆ ಕತೆಗಳನ್ನು ಹೇಳುತ್ತಿದ್ದ. ಸಾಹಿತ್ಯದ ಮಾತು ಬಂದರೆ ಶಿವರಾಮ ಕಾರಂತ, ಕುವೆಂಪು, ಬೇಂದ್ರೆ, ವೀಸೀ, ಪುತಿನ, ಗೋಕಾಕ್, ಕಣವಿ, ಕೈಲಾಸಂ, ಅನಕೃ, ಮ.ರಾ. ಮೂರ್ತಿ, ಬೀಚಿ, ರಾಶಿ ಮೊದಲಾದವರ ಬಗ್ಗೆ ಬಣ್ಣ ಬಣ್ಣದ ಪ್ರಕರಣಗಳನ್ನು ಹೇಳುತ್ತಿದ್ದ. ಇವನ ಬತ್ತಳಿಕೆಯಲ್ಲಿ ಇಲ್ಲದ ಬಾಣವೇ ಇರಲಿಲ್ಲ.

ದೇವರು ಇಷ್ಟೆಲ್ಲಾ ಕೊಟ್ಟಿದ್ದರೂ ಪರ್ಸನಾಲಿಟಿ ಮಾತ್ರ ಅವನ ಹೆಸರಿಗೂ ದೇಹಕ್ಕೂ ಅಜಗಜಾಂತರ. ಕಡ್ಡೀ ಪೈಲ್ವಾನ್‌ನಂತೆ ಇದ್ದ. ಹೇಗಾದರೂ ಮಾಡಿ ಭೀಮಾಚಾರಿ ದಪ್ಪಗೆ ಆಗುವಂತೆ ಮಾಡಬೇಕೆಂದು ತೀರ್ಮಾನಿಸಿ ಕೆಲವು ಪ್ರಯೋಗ ಮಾಡಿದೆವು. ಅಮೃತಹಳ್ಳಿ ಗರಡಿಗೆ ಸೇರಿಸಿ ಸಾಮು ಮಾಡಿಸಿ, ಆಡಿನ ಹಾಲು ಕುಡಿಸಿದೆವು. ಹಾರ್ಲಿಕ್ಸ್, ಬೋರ್ನ್‌ವಿಟಾ, ಕುಡಿಸಿದೆವು ಡಾಕ್ಟರ ಬಳಿ ಕರೆದೊಯ್ದು ಐರನ್ ಟಾನಿಕ್, ವಿಟಮಿನ್ ಪಿಲ್ಸ್ ಕೊಟ್ಟೆವು - ಸೇಬು, ಕಿತ್ತಲೆ, ದಾಳಿಂಬೆ, ದ್ರಾಕ್ಷಿ, ತಿನ್ನಿಸಿದೆವು. ಏನು ಮಾಡಿದರೂ ಅವನು ಇದ್ದ ಹಾಗೇ ಇದ್ದ. ಕಿಂಚಿತ್ತು ದಪ್ಪವಾಗಲಿಲ್ಲ. ನಮ್ಮ ಪ್ರಯೋಗದ ಫಲವಾಗಿ ಬಕಾಸುರನಂತೆ ತಿಂದು ಜೀರ್ಣಿಸಿಕೊಳ್ಳುವುದನ್ನು ಕಲಿತ.

★★★

ಯಾರೋ ಸಲಹೆ ಮಾಡಿದರು ಮದುವೆಯಾದರೆ ದಪ್ಪ ಆಗ್ತಾನೆ ಅಂತ. ಅದೇ ವೇಳೆಗೆ ಅವನ ಅಪ್ಪ ಅಮ್ಮ ಮಗನನ್ನು ನೋಡಲು ಉಡುಪಿಯಿಂದ ಬೆಂಗಳೂರಿಗೆ ಬಂದರು. ನಾವು ಸ್ನೇಹಿತರೆಲ್ಲಾ ಸೇರಿ ಅವರ ತಲೆ ಕೆಡಿಸಿ ಭೀಮಾಚಾರಿ ಮದುವೆಗೆ ಒಪ್ಪಿಸಿದೆವು. ಭೀಮಾಚಾರಿಗೆ ಹೆಣ್ಣು ಹುಡುಕಲು ಪ್ರಾರಂಭಿಸಿದೆವು.

ಒಂದೇ ಎರಡೇ ಹತ್ತಾರು ಹೆಣ್ಣುಗಳನ್ನು ನೋಡಿದ್ದಾಯಿತು. ಇವನು ಒಪ್ಪಿದರೂ ಹುಡುಗಿಯರು ಒಪ್ಪಲಿಲ್ಲ. ಸ್ವೀಟು ಖಾರಾ ಕಾಫಿ ಸೇವಿಸಿದಷ್ಟೇ ಲಾಭ. ಅವರ ಅಪ್ಪ ಅಮ್ಮ ಅವರ ತಮ್ಮನ ಮನೆಗೆ ಮಲೆನಾಡಿಗೆ ಹೋದರು. ಭೀಮಾಚಾರಿ ಮೀಸೆ ಗಡ್ಡ ಬಿಟ್ಟು ದೇವದಾಸ್‌ನಂತಾದ.

''ಕೂಡಲೇ ಹೊರಟುಬಾ!'' ಅಂತ ಭೀಮಾಚಾರಿಗೆ ಟೆಲಿಗ್ರಾಂ ಬಂತು ಮಲೆನಾಡಿನಿಂದ. ಆಚಾರಿ ಹತ್ತು ದಿನ ರಜೆ ಹಾಕಿ ಊರಿಗೆ ಹೋದ.

ಮೇನಕೆ ತೊರೆದ ವಿಶ್ವಾಮಿತ್ರನಂತೆ ಊರಿಗೆ ಹೋದವನು ಸನತ್‌ಕುಮಾರ್‌ನಂತೆ ವಾಪಸ್ಸು ಬಂದ. ಕೌಬಾಯ್ ಷೂ ಧರಿಸಿ, ಜೀನ್ಸ್‌ಪ್ಯಾಂಟು, ಕೂಲಿಂಗ್‌ಗ್ಲಾಸ್, ಜರ್ಕಿನ್ ಹಾಕಿಕೊಂಡು ಹೀರೋಹೋಂಡ ಗಾಡಿಮೇಲೆ ಬಂದ. ನಾವು ಅವಾಕ್ಕಾದೆವು.

ಅವನಿಗೆ ಮದುವೆಯಾಗಿತ್ತು. ಮಲೆನಾಡಿನ ಕೋಣಂದೂರು ಬಳಿಯ 'ಹುಲ್ಲುಗೋಡ' ಹಳ್ಳಿಯ ಅಡಿಕೆ ತೋಟದ ಯಜಮಾನರ ಒಬ್ಬಳೇ ಮಗಳು ಭೀಮಾಚಾರಿ ಕೈಹಿಡಿದಿದ್ದಳು. ಹೋಟೆಲ್ ಅಶೋಕದಲ್ಲಿ ಪಾರ್ಟಿಕೊಟ್ಟ. ಇವನ ಹೆಂಡತಿ ಬಿಳಿ ಜಿರಲೆ ತರಹ ಬೆಳ್ಳಗಿದ್ದಳು. ಇವನಿಗಿಂತ ಅರ್ಧ ಅಡಿ ಎತ್ತರವಾಗಿದ್ದಳು. ಅವಳಿಗೆ ಹೋಲಿಸಿದರೆ ಇವನೇ ದಪ್ಪ!

'ಮ್ಯಾರೇಜಸ್ ಆರ್ ಮೇಡ್ ಇನ್ ಹೆವನ್!' ಅಂತ ಇದಕ್ಕೇ ಹೇಳುವುದು.

ಇಪ್ಪತ್ತು ದಿನ ರಜೆ ಹಾಕಿ ಹನಿಮೂನ್‌ಗೆ ಹೊರಟರು.

ಎಲ್ಲರೂ ಊಟಿಗೋ, ಕೊಡಕ್ಕೆನಾಲ್‌ಗೋ, ಮೂನಾರ್‌ಗೋ, ಕಾಶ್ಮೀರಕ್ಕೋ ಹೋದರೆ ಇವನು ಅಂಡಮಾನ್ ದ್ವೀಪಕ್ಕೆ ಹೋದ.

ಹನಿಮೂನ್ ಮುಗಿಸಿಕೊಂಡು ಬಂದಮೇಲೆ, ಸಂಜಯ ನಗರದಲ್ಲಿ ಬೇರೆ ಮನೆ ಮಾಡಿ ಸಂಸಾರ ಹೂಡಿದ. ನಂಬಿದರೆ ನಂಬಿ ಬಿಟ್ಟರೆ ಬಿಡಿ ಆರು ತಿಂಗಳಲ್ಲಿ ಭೀಮಾಚಾರಿ ಮೈತುಂಬಿಕೊಂಡು ದಪ್ಪಗಾಗಿದ್ದ.

''ಇದೇನಯ್ಯ ನಿನ್ನ ಹೆಂಡ್ತಿ ಇದ್ದಹಾಗೆ ಇದ್ದಾರೆ. ನೀನು ದಪ್ಪಗಾಗ್ತಿದ್ದೀ ನಾವು ಅವರು ದಪ್ಪಗಾಗ್ತಾರೆ ಅನ್ಕೊಂಡಿದ್ವಿ'' ಎಂದು ಚುಡಾಯಿಸಿದೆವು.

ನಾಡಿಗೆ ದೊಡ್ಡ ಹಬ್ಬ ದೀಪಾವಳಿ ಬಂತು. 'ಮಗಳು ಅಳಿಯ ಹಬ್ಬಕ್ಕೆ ಊರಿಗೆ ಬರಬೇಕು' ಅಂತ ಭೀಮಾಚಾರಿ ಅತ್ತೆಮಾವ ಬಂದು ಕರೆದದ್ದಲ್ಲದೆ, ''ನಮ್ಮೂರ ಸಂಪ್ರದಾಯ, ನಿಮ್ಮ ಜೊತೆ ಗೆಳೆಯನೊಬ್ಬನನ್ನು ಕರೆತನ್ನಿ. ಅಂದಹಾಗೆ ಒಂದು ಹತ್ತು ದಿನ ರಜೆ ಹಾಕಿ ಬನ್ನಿ'' ಎಂದು ವಕ್ಕಣೆ ಹೇಳಿ ಹೋದರು. ಭೀಮಚಾರಿ ನನ್ನನ್ನು ಗೆಳೆಯನಾಗಿ ಬರಲು ಕೇಳಿದ. ನಾನು ಒಪ್ಪಿಕೊಳ್ಳಲಿಲ್ಲ. ''ಸುಬ್ಬಣ್ಣ ನಿನ್ನ ಜಿಗ್ರಿದೋಸ್ತ್ ಅವನನ್ನೇ ಕರಕೊಂಡು ಹೋಗು!'' ಎಂದು ಹೇಳಿದೆ. ಸುಬ್ಬಣ್ಣ ಕರೆದ ಕೂಡಲೇ ಒಪ್ಪಿಕೊಂಡ.

ದೀಪಾವಳಿ ಹಬ್ಬಕ್ಕೆ ಆ ವರ್ಷ ನಮ್ಮ ಕಂಪೆನಿಗೆ ನಾಲ್ಕು ದಿನ ರಜೆ ಬಂತು. ನಾವು ನಮ್ಮ ರಜೆ ನಾಲ್ಕು ದಿನ ಹಾಕಿಕೊಂಡು ಊರುಗಳಿಗೆ ಹೋಗುವ ತೀರ್ಮಾನ ಮಾಡಿದೆವು. ಭೀಮಾಚಾರಿ ಮತ್ತು ಸುಬ್ಬಣ್ಣ ಬಲವಂತ ಮಾಡಿ ನನ್ನನ್ನೂ ಅವರ ಜೊತೆ ಬರಲು ದುಂಬಾಲು ಬಿದ್ದರು. ಮಲೆನಾಡಿನ ನಿಸರ್ಗ ಸೌಂದರ್ಯ ನೋಡಲು ಇದೊಂದು ಅವಕಾಶವೆಂದರು. ''ಮಲೆನಾಡ ಹೆಣ್ಣು ಬಲುಚೆನ್ನ!'' ಎಂದು ಆಸೆ ಹುಟ್ಟಿಸಿದರು.

ನನಗೂ ಮಲೆನಾಡು ನೋಡುವ ಆಸೆಯಿತ್ತು. ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದ ನನಗೆ, ಮಲೆನಾಡು ನೋಡುವ ಹಂಬಲವೇನೋ ಇತ್ತು. ಅವರ ಬಲವಂತಕ್ಕೆ ಒಪ್ಪಿಕೊಂಡಂತೆ ಒಪ್ಪಿಕೊಂಡೆ.

ಶಿವಮೊಗ್ಗ ಬಸ್ಸು ಹೊರಡಲು ಸಿದ್ಧವಾಗಿತ್ತು. ಬಸ್ಸಿನ ತುಂಬ ಜನ ತುಂಬಿದ್ದರು. ನಾವು ಮೊದಲೇ ಸೀಟ್ ರಿಸರ್ವ್ ಮಾಡಿಸಿದ್ದರೂ ಯಾರೋ ಮೊದಲೇ ಕುಳಿತಿದ್ದರು. ಕಂಡಕ್ಟರ್ ಕರೆದುಕೊಂಡು ಬಂದು ಅವರನ್ನು ಎಬ್ಬಿಸಿ ನಾವು ಕೂಡುವುದರಲ್ಲಿ ಸಾಕು ಸಾಕಾಯಿತು. ''ಅರ್ಧಗಂಟೆ ಬೇಗ ಬರಬಾರದೇ ಸಾರ್!'' ಎಂದು ಸಿಡುಕಿದ ಕಂಡಕ್ಟರ್. ಭೀಮಾಚಾರಿ ಹೆಂಡತಿ ರಮ್ಯ ಕಿಟಕಿ ಇರುವ ಸೀಟಿನಲ್ಲಿ ಕುಳಿತಳು - ಅವಳ ಪಕ್ಕ ಭೀಮಾಚಾರಿ. ನಾನು ಸುಬ್ಬಣ್ಣ ಬೇರೆ ಎರಡು ಸೀಟಿನಲ್ಲಿ ಕುಳಿತಿದ್ದೆವು. ಅಂತೂ ಇಂತೂ ಬಸ್ಸು ಹೊರಟಿತು.


ನಾನು ತಂಗಾಳಿಗೆ ಮೈಯೊಡ್ಡಿ ಶಾಲು ಮೈಮೇಲೆ ಹೊದ್ದುಕೊಂಡು ಮಲಗಿದೆ - ಸುಬ್ಬಣ್ಣ ತುಮಕೂರು, ತಿಪಟೂರು, ಅರಸೀಕೆರೆ, ಭದ್ರಾವತಿ, ಎಲ್ಲಾ ಕಡೆ ಇಳಿದು ರಸ್ತೆಬದಿ ಮಿನಿ ಹೋಟೆಲ್‌ನಲ್ಲಿ 'ಚಾ' ಕುಡಿಯುವುದು ನಮಗೆಲ್ಲಾ ಏನಾದರೂ ತಿನ್ನಲು ತರುವುದು ಮಾಡುತ್ತಿದ್ದ.

ಬೆಳಗಿನ ಜಾವ ಶಿವಮೊಗ್ಗ ತಲುಪಿದೆವು. ಬಸ್‌ಸ್ಟಾಂಡಿನಲ್ಲಿ ಮುಖ ತೊಳೆದುಕೊಂಡು ಕಾಫಿ ಕುಡಿದೆವು. ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಹೋಗುವ ಪ್ರೈವೇಟ್ ಬಸ್ ಹತ್ತಿ ಕುಳಿತೆವು. ಕೋಣಂದೂರು ಬಂದಾಗ ಇಳಿದೆವು. ಭೀಮಾಚಾರಿ ಮಾವನವರು ಕಾರು ಕಳುಹಿಸಿದ್ದರು. ರಮ್ಯಳ ಅಣ್ಣ ಸುರೇಶ ಬಂದಿದ್ದ. ಕಾರಿನಲ್ಲಿ ಕೊಣಂದೂರಿನ ದೊಡ್ಡ ಹೋಟಲೊಂದಕ್ಕೆ ಕರೆದೊಯ್ದ. ಕೊಣಂದೂರಿನ ಸುಮಾರಾದ ಊರು. ಹೈಸ್ಕೂಲು ಇದೆ. ದೊಡ್ಡ ಆಸ್ಪತ್ರೆಯಿದೆ. ಸುತ್ತಮುತ್ತಲ ಹಳ್ಳಿಗಳಿಗೆ ಇದೇ ವ್ಯಾಪಾರ ಕೇಂದ್ರ. ನನಗೆ ತಟ್ಟನೆ ಕೋಣಂದೂರು ಲಿಂಗಪ್ಪನವರ ಕನ್ನಡಪರ ಹೋರಾಟ ನೆನಪಾಯಿತು.

ಹೋಟೆಲಿನಲ್ಲಿ ಕೊಟ್ಟ ಕಡಬು-ಕಾಯಿಹಾಲು, ಪತ್ರೊಡೆ ತಿಂದೆವು. ಇವು ಮಲೆನಾಡ ಬಾದ್ಯಗಳು - ನನಗೇನೋ ತುಂಬ ಹಿಡಿಸಿತು. ಭೀಮಾಚಾರಿ, ಸುಬ್ಬಣ್ಣನನ್ನು 'ಅಳಿಯನ ಜೊತೆ ಬಂದಿರುವ ಗೆಳೆಯ' ಎಂದು ಸುರೇಶನಿಗೆ ಪರಿಚಯ ಮಾಡಿದ. ಸುಬ್ಬಣ್ಣನಿಗೆ ರಾಜೋಪಚಾರ ಶುರುವಾಯಿತು ಘಟ್ಟದ ಕೆಳಗಿನ ಜನ ಅಳಿಯನಿಗಿಂತ ಗೆಳೆಯನಿಗೇ ಹೆಚ್ಚು ಉಪಚಾರ ಮಾಡುವಂತೆ ಕಾಣುತ್ತಿತ್ತು. ಸುಬ್ಬಣ್ಣ ಹೊಟ್ಟೆ ಬಿರಿಯುವಷ್ಟು ತಿಂದ.

ಕೋಣಂದೂರಿನಿಂದ ನಾಲ್ಕು ಮೈಲಿ ದೂರದಲ್ಲಿ 'ಹುಲ್ಲರೋಡ' ಇದೆ ಅಲ್ಲೇ ಭೀಮಾಚಾರಿ ಮಾವನ ಮನೆ. ಕಾರು ಮನೆ ಮುಂದೆ ನಿಂತಾಗ ಮನೆ ಮಂದಿ ಅಕ್ಕಪಕ್ಕದ ಬೀದಿ ಮಂದಿ ಎಲ್ಲಾ ಗುಂಪಾಗಿ ಸೇರಿ ಸ್ವಾಗತಿಸಿದರು ಎಲ್ಲರ ಪರಿಚಯವಾಯಿತು. ನಮ್ಮ ಪರಿಚಯ ಅವರಿಗೆ ಮಾಡಿಕೊಟ್ಟಿದ್ದಾಯ್ತು ಮತ್ತೆ 'ಗೆಳೆಯ' ಸುಬ್ಬಣ್ಣನಿಗೆ ಊರಿನ ಮಂದಿಯಿಂದ ಉಪಚಾರದ ಮೇಲೆ ಉಪಚಾರವಾಯ್ತು. ಬಿಸಿ ಬಿಸಿ ನೀರು ಸ್ನಾನ ಮಾಡಿ, ದೇವರಿಗೆ ನಮಸ್ಕಾರ ಹಾಕಿ ಬಾಳೆ ಎಲೆ ಹಾಸಿ, ಬಿಸಿ ಬಿಸಿ ಊಟ ಮಾಡಿದೆವು. ತಂಬುಳಿ ಚೆನ್ನಾಗಿತ್ತು ಮಜ್ಜಿಗೆ ಓಗರಣೆ - ಐದು ವರ್ಷಗಳ ಹಳೆಯ ಕಳಿತ ಮಾಮಿಡಿ ಉಪ್ಪಿನಕಾಯಿ ಬಾಯಿಯಲ್ಲಿ ನೀರು ಸುರಿಸಿದವು. ಸಿಹಿಗೆ ಪಾಯಸ - ಊಟವಾದ ಮೇಲೆ ಮನೆ ಹಿಂಭಾಗದ ಬಿಡದಿ ಮನೆಯಲ್ಲಿ ನಾನು - ಸುಬ್ಬಣ್ಣ ನಿದ್ದೆಗೆ ವಶವಾದೆವು.

(ಸಶೇಷ)



"Stand up on the bench" ನ ಪ್ರಯೋಜನಗಳು

– ಶ್ಯಾಮಲ ರವಿಶಂಕರ್

ಆ ಕಾಲದಲ್ಲಿ ನಾನಿನ್ನೂ ಸ್ಕೂಲಿಗೆ ದಾಖಲಾಗಿರಲಿಲ್ಲ. ಹಾಗೆ ಅಂತ ನಾನೇನೂ ಬಹಳ ಸಣ್ಣವಳೇನೂ ಆಗಿರಲಿಲ್ಲ. 7-8 ವರ್ಷ ವಯಸ್ಸಿರಬಹುದು. ನನ್ನ ಅಣ್ಣ ನನಗಿಂತ ಎರಡು ವರ್ಷ ದೊಡ್ಡವನು. ಪ್ರತಿದಿನ ವಿರಾಮದ ವೇಳೆಯಲ್ಲಿ ಮನೆಗೆ ಬಂದು ಊಟ ಮಾಡಿ ಹೋಗ್ತಾ ಹೋಗ್ತಾ ಬಾಯಿಗೆ ಎರಡು ಚಮಚ ಸಕ್ಕರೆಯನ್ನು ಎರಚಿಕೊಂಡು (ಅವನ ಅವಿಚ್ಛಿನ್ನ ಭಕ್ತಳಾದ) ನನಗೂ ಒಂದು ಚಮಚ ಕೊಟ್ಟು ಹೋಗುತ್ತಿದ್ದ.

ಅವತ್ತು ಅದೇನಾಯಿತೋ, ಅವನು ಊಟಕ್ಕೆ ಬರಲೇ ಇಲ್ಲ. ಕಾದೂ ಕಾದೂ ಕಡೆಗೆ ನಮ್ಮಮ್ಮ ನನ್ನನ್ನು ಕರೆದು 'ನಿಮ್ಮಣ್ಣಂಗೆ ಊಟ ಕೊಟ್ಟುಬಾ' ಎಂದು ಅವನ ಸ್ಕೂಲಿಗೆ ಕಳಿಸಿದರು. ನಾವಿದ್ದುದ್ದು ಮಲ್ಲೇಶ್ವರದ 5ನೇ ಕ್ರಾಸಿನಲ್ಲಿ. ಸ್ಕೂಲೋ (ಆ ಕಾಲದ ನಾಮಕರಣದ ಪ್ರಕಾರ) ಮೈನ್ ಮಿಡ್ಲ್‌ಸ್ಕೂಲ್ ನನ್ನ background ಹೇಳಿದ್ದೀನಲ್ಲ - ಸ್ಕೂಲ್ ಅನ್ನೋ conceptಏ ನನಗೆ ಇರಲಿಲ್ಲ. ಜೊತೆಗೆ ಒಬ್ಬಳೇ ಎಲ್ಲಾದರೂ ಹೋಗಿದ್ದುಂಟೇ? ಉಹೂಂ... ಏಕದಂ ಪುಕ್ಕಲು ಸ್ವಭಾವ. ಹೋಗೊಲ್ಲಾ ಅಂತ ಹೇಳೂಕ್ಕೂ ಭಯ. ಹೇಳಿದ್ರೂ ''ನಿನಗೇನು ದಾಡಿ, ಮಟ ಮಟ ಮಧ್ಯಾಹ್ನದಲ್ಲಿ ಭಯವೆಂಥಾದ್ದು, ಯಾರೂ ಕಂಡಿಲ್ಲದ ಕಾಡಿಗೇನೂ ಹೋಗ್ತಾ ಇಲ್ಲವಲ್ಲ. ಎಡವಿದ್ರೆ ಸಿಗೋ ಸ್ಕೂಲಿಗೆ ಹೋಗೋಕೆ ಯಾಕೆ ರಾದ್ಧಾಂತ'' ಅಂತಾರೆ. ಹಾಗಾಗಿ ಎಣ್ಣೆ ಮುಖ ಮಾಡಿಕೊಂಡು ಹಿಂದೆ ಮುಂದೆ ನೋಡ್ಕೋತಾ ಹೊರಟೆ. ಜೀವ ಎಡಗೈಲಿ, ಬಲಗೈಲಿ ಊಟದ ಡಬ್ಬಿ! ಮಲ್ಲೇಶ್ವರಂ ಸರ್ಕಲ್‌ವರೆಗೂ ಹೋದೆ (ಅಂದರೆ ½ ಫರ್ಲಾಂಗು!) ಅಲ್ಲಿ ಒಬ್ಬ ಪೋಲಿಸ್ ನಿಂತಿದ್ದ. ನನಗಂತೂ 'ಪೋಲಿಸ್' ಅನ್ನೋ ಪದ ಕೇಳಿಸಿದ್ರೇನೇ ಮೈಯೆಲ್ಲಾ ಬೆವರು. ಇನ್ನ ಅವನ cross ಮಾಡ್ಕೊಂಡು ಹೋಗೋದು ಅಂದ್ರೆ ಏನು? ಸತ್ನೋ ಬಿದ್ನೋ ಅಂತ ವಾಪಸ್ಸು ಓಡೋಡಿ ಬಂದು ಮನೆ ಸೇರ್ಕೊಂಡ್ಬಿಟ್ಟೆ.


'ಇದೇನೇ, ಇಷ್ಟು ಬೇಗ ಬಂದ್ಬಿಟ್ಟೇ' ಅಂದ್ರು ಅಮ್ಮ. ಆಮೇಲೆ ಕಾರಣ ತಿಳಿಯಿತು ಅವರಿಗೆ! "ಹುಚ್ಗೂ ಒಂದು limit ಇರಬೇಕು ಕಣೇ. ಸುಮ್ನೆ ಅತಿ ಆಡ್ದೆ ಹೋಗಿ ಊಟ ಕೊಟ್ಟು ಬಾ" ಅಂತ ಹುಕುಂ ಬಂತು, ಅಮ್ಮನಿಂದ ಅದೂ ನಿರ್ವಿಕಾರಚಿತ್ತರಾಗಿ...

ಸರಿ, ವಿಧಿಯಿಲ್ಲದೆ ಮತ್ತೆ ಹೊರಟೆ. with a fond wish that the policeman would have vanished into thin air. No ssir, he had not! ಹಿಂದೆ ಹಿಂದೆ ನೋಡ್ತಾ ನಿಂತಿದ್ದ ನನ್ನ ಬೆಪ್ಪು ಮುಖ ನೋಡಿದ ಇಬ್ಬರು ಹೆಂಗಸರು, ನಾನು ರಸ್ತೆ ದಾಟಲು ಭಯ ಪಡುತ್ತಿದ್ದೇನೆ ಅಂದ್ಕೊಂಡು ನನ್ನ ನೆರವಿಗೆ (ನಾನು ಕೇಳದಿದ್ದರೂ) ಬಂದು ರಸ್ತೆ ದಾಟಿಸಿ ಹೋದರು. God bless them!

ಜಟಕ ಸ್ಟಾಂಡಿನ ಪಕ್ಕದಲ್ಲಿದ್ದ ಸಣ್ಣ ಗೇಟಿನೊಳಗೆ ನುಸುಳಿದೆ. ಒಂದು ಕ್ಷಣ ನನಗೆ ದಿಗ್ಭ್ರಮೆಯಾಯಿತು. ಇಷ್ಟು ದೊಡ್ಡ ಸ್ಕೂಲಿನ ಆವರಣದಲ್ಲಿ ನಾನು ಹೇಗೆ ನನ್ನಣ್ಣನ್ನ ಪತ್ತೆ ಮಾಡುವುದು? ಅವನ ಭಕ್ತಳಾದ್ರೂ ಹಿಡಿಶಾಪ ಹಾಕ್ತಾ aimless ಆಗಿ ಅಡ್ಡಾ-ದಿಡ್ಡಿ ಓಡಾಡ್ದೆ. ಎದುರಿಗೆ ಒಂದು ಗೋಡೆ ಕಾಣಿಸ್ತು. ಅದನ್ನೇ ನೋಡ್ತಾ ಆಕಡೆಗೆ ನಡೀತಾ ಇದ್ದೆ. ಇದ್ದಕ್ಕಿದ್ದಂತೆ ಯಾರೋ ಕರ್ಕಶ ಧ್ವನಿಯಲ್ಲಿ ಕಿರಿಚ್ತಾ ಇದ್ಧಂಗಿತ್ತು. ಕಿಟಕಿ ಕಡೆ ಕಣ್ಣು ಹಾಯಿಸ್ದಾಗ ಒಬ್ಬ ಹುಡುಗ ಬೆಂಚಿನ ಮೇಲೆ ನಿಂತಿದ್ದಾನೆ. ಅವನಿಗೆ ನಗು ಬರ್ತಾ ಇದೆ, control ಮಾಡ್ಕೋತಾ ಇದಾನೆ. Back ground ನಲ್ಲಿ ಕರ್ಕಶ ಧ್ವನಿ ನಡೀತಾ ಇದೆ! ಇದೇನಪ್ಪಾ, ಸ್ಕೂಲು ಅಂದ್ರೆ ಹೀಗೇನೋ ಏನೋ. ಅಂತ ಎಲ್ಲಾ ವಿಚಾರಗಳೂ ನನ್ನ ತಲೇಲಿ ಇಣುಕಿದವು, ಒಟ್ಟಿಗೇ Curiosity won over confusion. So ಕಿಟಕೀಲಿ ಬಗ್ಗಿ ನೋಡಿದೆ - ಅರೆ, ಅವನು ನಮ್ಮಣ್ಣನ friend ಬಾಲಾಜಿ! ಸಧ್ಯ ನನಗೂ ಒಬ್ಬ ಪರಿಚಯಸ್ಥರ ಮುಖ ಕಂಡಿತಲ್ಲ ಅಂತ excitement! ಅವನು ಏನೇನೋ ಹೇಳಲು ಪ್ರಯತ್ನಿಸ್ತಾ ಇದ್ದ - ಅದೂ ಸಂಜ್ಞೆಯಲ್ಲಿ. ಆದರೆ ಅದು ನನಗೆ ಅರ್ಥವಾಗ್ಲಿಲ್ಲ. ಅಷ್ಟರಲ್ಲಿ 'ರಾಮಚಂದ್ರನ ತಂಗಿ, ರಾಮಚಂದ್ರನ ತಂಗಿ' ಅಂದಿದ್ದು ಕೇಳಿಸಿತು. ಅಬ್ಬ ಬದುಕಿದೆಯಾ ಬಡಜೀವ ಎಂದು ನೆಮ್ಮದಿಯ ಉಸಿರು ಬಿಟ್ಟೆ.

ಅಷ್ಟು ಹೊತ್ತಿಗೆ ಟೀಚರು ಬಂದು ನನ್ನನ್ನು ನೋಡಿ "ಯಾರಮ್ಮಾ ನೀನು ಏನು ಬೇಕಾಗಿತ್ತು?" ಎಂದು ಕೇಳಿದಾಗ ನಾನು ದ್ರವವಿಲ್ಲದ ನಾಲಿಗೆಯಿಂದ

'ಚೆಪ್ಪೆಪ್ಪೆ' ಎಂದು ಏನು ಒದರಿದನೋ ನೆನಪಿಲ್ಲ. perhaps he understood my mission. ನಮ್ಮಣ್ಣ ಹೊರಗಡೆ ಬಂದ, ಊಟ ಮಾಡಿದ ಮತ್ತೆ ತರಗತಿಯೊಳಗೆ ಹೋದ. ಅವನು ಮನೆಗೆ ಬಂದ ಮೇಲೆ ನಮಗೆ ತಿಳಿಸಿದ ಕಥೆ ಏನೆಂದರೆ - ಬಹಳ ವಾಚಾಳಿಯಾದ ಬಾಲಾಜಿಗೆ, being caught red handed, stand up on the bench ಅಂತ ಟೀಚರು, ನಿಲ್ಲಿಸಿದ್ದು (ಅದೇನೂ ವಿಶೇಷವಲ್ಲ, ಅವನಿಗೆ ಸರ್ವೇ ಸಾಮಾನ್ಯ) ಎಲ್ಲಾರ ತಲೆ ನೋಡಿ (Aerial view) ಬೇಜಾರಾಗಿ ಕಿಟಕಿ ಹೊರಗೆ ನೋಡ್ತಾ ಇದ್ದ ಬಾಲಾಜಿಗೆ ಕಾಣ್ಸಿದ್ದು ನನ್ನ ಹ್ಯಾಪ್ ಮೋರೆ! ಸರಿ, being typical of him, ಹಲ್ಕಿರಿತ ಶುರು ಆಯ್ತು. ಟೀಚರ್ ನಿಂಗೆ ನಾಚ್ಕೆ ಇಲ್ಲಾ. ಶುದ್ಧ ಅಲ್ಲಾಲ್‌ಟೋಪಿ, ನಿನ್ನ ಬಾಯಿ ಸ್ವಲ್ಪ ಮುಚ್ಕೋ ಅಂದ್ರಂತೆ ಅವನು ನಗು ತಡ್ಕೊಳ್ದೆ, ನನ್ನ ಕಡೆ ಕೈತೋರಿಸಿದನಂತೆ. ನನ್ನನ್ನ ನೋಡಿದ ಟೀಚರು, ಇವನ ಹತ್ರ ಹೋಗಿ, 'ಥೂ... ಮುಂಡೇದೇ, ಮುರಡಿ ಎತ್ತರ ಬೆಳೆದಿಲ್ಲ. ಹುಡುಗೀರ ಕಡೆ ನೋಡಿ ಸಂಜ್ಞೆ ಮಾಡ್ತಿದ್ದೀಯಾ' ಅಂತ Incometax ಮೇಲೆ surcharge ಹಾಕತ್ತಲ್ಲಾ ಸರಕಾರ, ಹಾಗೆ ಬೆಂಚಿನ ಮೇಲೆ ನಿಂತಿದ್ದವನಿಗೆ ಕಿವಿ ಹಿಂಡಿದ್ರಂತೆ. ಆಗ ಕುಯ್ಯೋ



ಮರ್ರ್ರೋ ಅಂತ ''ಹುಡುಗಿ ಅಲ್ಲಾ ಸಾ. ರಾಮಚಂದ್ರನ ತಂಗಿ, ರಾಮಚಂದ್ರನ ತಂಗಿ'' ಅಂತ ಕೂಕ್ಕೊಂಡ್ನಂತೆ. ಯಾರತಂಗಿ ಆದ್ರೆ ಏನಂತೆ, ಹುಡುಗಿ ಅಲ್ವೇ ಅವಳು ಅಂತ ಬೆನ್ನಮೇಲೆ ಎರಡು ಥಳಿಸಿ "Get out of my class and get lost, you fool' ಅಂತಂದ್ರಂತೆ ಟೀಚರ್ರು. ಈ ಮಹಾಶಯ ಬೆಂಚಿನಿಂದ ಒಂದೇ ಜಿಗಿತಕ್ಕೆ ಹಾರಿ ಕ್ಲಾಸಿನಿಂದ ಹೊರಕ್ಕೆ ಓಡಿ ಹೊರಟ್ಹೋದ್ನಂತೆ. How to dispose off the body ಅಂತ wodhouse ಹೇಳಿದ್ಹಾಗೆ, ಟೀಚರ್ರಿಗೆ ಈಗ ಒಂದು ಹೊಸ problem create ಮಾಡಿ ಹೋದ ಬಾಲಾಜಿ - ಅದೇನಪ್ಪ ಅಂದ್ರೆ, "What to do with his bag of books and tiffin box" ಅಂತ!

ಅಂತೂ ಈ ಪ್ರಕರಣದಿಂದ ಲಾಭ ಆಗಿದ್ದು ನನಗೆ ಏನಂತೀರಾ?

★★★

ಒಂದೊಂದು ಸಲ ಎಂಥಾ ಸಣ್ಣ ಅಥವಾ ಕೆಲಸಕ್ಕೆ ಬಾರದ ವಿಷಯವಾದ್ರೂ ಜೀವನದಲ್ಲಿ ಉಪಯೋಗಕ್ಕೆ ಯಾವಾಗ, ಎಲ್ಲಿ ಆದರೂ ಬರಬಹುದು. ಹಾಗೆ ಇನ್ನೊಂದು stand up on the benchನ ಪ್ರಕರಣ ನೆನಪಾಗ್ತಾ ಇದೆ.

ನಮ್ಮವರು ಆಫೀಸಿನಿಂದ ಬಂದವರೇ ಒಂದು inland letterನ ಕೈಯಲ್ಲಿತ್ತು ಅವರ ಬಾಲ್ಯದ ಸ್ನೇಹಿತ ರಘು ಅಂತ ಇದಾನಂತೆ ಅವನು ಹೇಗೋ ನನ್ನ address ಹುಡ್ಕೊಂಡು ಕಾಗದ ಬರೆದಿದ್ದಾನೆ. ನೋಡು ಅಂದ್ರು. ಅದರ ಒಕ್ಕಣೆಮಾತ್ರ ತಮಾಷೆಯಾಗಿತ್ತು - ಮೊದಲ ಅರ್ಧ ಎಲ್ಲಾ ಮಾಮೂಲು. ಆಮೇಲೆ ತನಗೆ ಈ ಊರಿಗೆ ವರ್ಗವಾಗಿ ಬಂದಿರೋದು, ಇತ್ಯಾದಿ, ಇತ್ಯಾದಿ. ಕಡೇಲಿ, ನೀನು ನಾನು ಅನ್ಕೊಂಡಿರೋ ರವೀನೇ ಆಗಿದ್ರೆ, ನಾವು ಇಂತಹ ದಿನ ಇಂತಹ ಹೋಟಲಿನಲ್ಲಿ ಭೇಟಿ ಆಗೋಣ ಅಂತ ಇತ್ತು. ಅಕಸ್ಮಾತ್ತಾಗಿ ಅಲ್ಲದಿದ್ರೆ ಏನು ಮಾಡುವುದು? ಅಂತ ಬರೆದು, ಆಮೇಲೆ ಹೊಡೆದು ಹಾಕಿದ್ದರು! ಇವರಿಗೂ ಅನುಮಾನವಿತ್ತಾದರೂ, ನೋಡೇ ಬಿಡೋಣ ನೀನೂ ಬಾ, ಅವನು ಬೇರೆ ಯಾರೋ ಆದ್ರೆ ನಾವಿಬ್ರೂ ಎಲ್ಲೆಲ್ಲೋ ಮಿಗಿಸಿರುವ ಕೆಲಸಗಳನ್ನು one by one ಮಾಡೋಕೂ ಆಯ್ತು ಅಂದ್ರು.

ಸರಿ, ನಿಗದಿಪಡಿಸಿದ್ದ ಜಾಗಕ್ಕೆ ಟೈಂಗೆ ಹೋದ್ವಿ, ಇಬ್ಬರೂ ಪರಸ್ಪರ ಗುರ್ತಿಸಿದರು, ಜಾಸ್ತಿಯೇನೂ ನೀನು ಬದಲಾಗಿಲ್ಲ ಅಂತ ಅವರು ಇವರ್ನ 'ನೀನು

ಸಿನಿಮಾದಲ್ಲಿ ಹೋಗಿ ಜಾಯಿನ್ ಆಗ್ತೀನ ಅಂತ ಹಾರಾಡ್ತಾ ಹೇಗೆ ಬಂದು ಮೈಸೂರು ಬ್ಯಾಂಕಿನಲ್ಲಿ ಸಿಕ್ಕಿ ಹಾಕ್ಕೊಂಡ್ಯೋ' ಅಂತ ಇವರು ಅವರ್ನ ಪರಿಶೀಲಿಸ್ಕೊಂಡ್ರು. ಸರಿ 'ಹೋಟಲು ಯಾಕೆ, ನನ್ನ ಮನೆ ಇಲ್ಲೇ ಹತ್ರ ಇದೆ, ಅಲ್ಲಿಗೇ ಹೋಗೋಣ' ಅಂದ್ರು ನಮ್ಮವರು.

ಅಳಿದುಳಿದ ಕೆಲಸಗಳು ಇವತ್ತು ಮುಗಿಸ್ತೇವೆ ಅಂದ್ಕೊಂಡಿದ್ದ ನನ್ನ optimism ಗೆ ನಾನೇ bye ಹೇಳಿ ಮನೆಕಡೆ ನಡೆದ್ವಿ, on the whole, ನಾನೂ enjoy ಮಾಡ್ದೆ ಈ ಸನ್ನಿವೇಶಾನಾ ಅಂತಿಟ್ಕೊಳ್ಳಿ,

ಮನೇಲಿ ಅದೂ ಇದೂ ಮಾತಾಡ್ತಾ ಕಾಫಿ, ತಿಂಡಿ ಜೊತೆಗೆ ಹಾಸ್ಯ ಚಟಾಕಿಗಳೂ, ಸೀರಿಯಲ್ಸ್ ವಿಷಯಗಳೂ ಎಲ್ಲಾ ಚರ್ಚಿಸಲ್ಪಟ್ಟವು. ಹಾಗೇ ನಿನ್ನ ಜೊತೆ ಬರ್ತಿದ್ನಲ್ಲಾ ಶೀನ ಅವನೆಲ್ಲಿದ್ದಾನೋ? ನಿನಗೇನಾದ್ರೂ ಗೊತ್ತಾ ಅಂತ ಕೇಳಿದ್ರು ರಘು.

ನಮ್ಮವರು 'ನೋಡಪ್ಪಾ ನಮ್ಮ ಕ್ಲಾಸಿನಲ್ಲಿ 25ಜನ ಶೀನಂದ್ರೂ (ಅಲಿಯಾಸ್ ಶ್ರೀನಿವಾಸ) 25 ಜನ ವೆಂಕ್ಟಂದ್ರೂ (ಅರ್ಥಾತ್ ವೆಂಕಟೇಶ) ಕಳೆದಮೇಲೆ ಒಬ್ಬಿಬ್ಬರು ರಾಮ, ಕೃಷ್ಣ, ರಂಗ. ಅಂತಾದ್ರಲ್ಲಿ ಅದೂ ಅಲ್ಲದೆ ನನ್ನ ಜೊತೆ atleast 3 ಶೀನಿಗಳಿದ್ರು ಕಣೋ, ಸ್ವಲ್ಪ elaborate ಮಾಡು ಅಂದ್ರು.

ಸರಿ, ಶುರು ಆಯಿತು narration. That pariticular ಶೀನ ಮತ್ತು ರಘು ಇಬ್ಬರೂ ಕ್ಲಾಸಿನಲ್ಲಿ ಹಾಗೂ ಟೀಚರ್ರಿನ ಸಮಕ್ಷಮದಲ್ಲಿ ಲೋಕಾಭಿರಾಮವನ್ನು ಹಂಚಿಕೊಳ್ಳುತ್ತಾ ಹಲ್ಲು ಕರಿಯುತ್ತಾ ಎಂಥಾ ಹಂತಕ್ಕೆ ತಲುಪಿದರೆಂದರೆ, ಇಬ್ಬರೂ ಒಬ್ಬರ ದಂತಪಂಕ್ತಿಯ ಅಂದವನ್ನು ಮತ್ತೊಬ್ಬರು ಮೆಚ್ಚಿ ಒಪ್ಪಿಗೆ ಸೂಸಲು ಚಪ್ಪಾಳೆ ಹೊಡೆದು ಸಂತಸದಿಂದಿರಲಾಗಿ, ಆ ಸಮಯದೊಳ್ ಟೀಚರ್ರ್ ಎಂಬ ಒಬ್ಬ ಕರಾಳ ರಾಕ್ಷಸನ ವಕ್ರದೃಷ್ಟಿ ಇವರೀರ್ವರ ಮೇಲೆ ಕೇಂದ್ರೀಕೃತವಾದಂತೇನೇ. ಆ ಟೀಚರ್‌ಗೆ ಯಾವುದೇ ಚಿಕ್ಕ ವಿಷಯವೂ ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳುವ ಅಭ್ಯಾಸ any sort of excitement ಆದ್ರೆ, ಮೊದಲು ಅವರು ಉಲಿಯುತ್ತಿದ್ದುದು ತೆಲುಗು ಭಾಷೆ! (ಮಾತೃಭಾಷೆಯೊ?)

"ಯವಡ್ರಾವಾಡು ಏಮಿ ಸುಡುಗಾಡು ಚೇಸ್ತುನ್ನಾರ್ರಾ, ಇಕ್ಕಡಾ? ಈ ದರಿದ್ರಾನಿಕಿ ನಾಕ್ಲಾಸೀ ಎಂದುಕು ಏರುಕೊನ್ನಾರ್ರಾ (ಯಾವನೋ ಅವನು ಏನು ಸುಡುಗಾಡು ನಡಸ್ತಿದ್ದೀರ್ರೋ ಈ ದರಿದ್ರಕ್ಕೆ ನನ್ನ ಕ್ಲಾಸೇ ಏಕ್ರೋ

ಆರಿಸಿಕೊಂಡಿದ್ದೀರ್ರೋ?) ಅಂತ ಗುಡುಗಿ, ಮೂಗಿಗೆ ಎರಡು ಚಿಟಿಕೆ ನಶ್ಯಏರಿಸಿ, ಘುಂ ಘಾಂ ಅಂತ ಅಬ್ಬರವಾಗಿ ಸೀನಿ "ಎಕ್ಕಂಡಿರ್ರಾ ಬೆಂಚುಮಿಂದ" ಅಂದ್ರಂತೆ.

ಇಷ್ಟಾದರೂ ಇವರಿಬ್ಬರೂ ಹಸನ್ಮುಖಿ (ಇನರ್ಷಿಯಾದಲ್ಲಿದ್ದಿರಬೇಕು ಇಸ್ನಾ!) ಗಳಾಗಿ ಗುರುಗಳ ಆದೇಶವನ್ನು ಪಾಲಿಸಿ ನಿಂತಲ್ಲಿಂದಲೇ ಪಾಠ ಪ್ರವಚನ ಕೇಳಲು ಯತ್ನಿಸುತ್ತಿದ್ದರಂತೆ. ಮುಂದಿನ ಪೀರಿಯಡ್ ಟೀಚರು ರಜೆಯ ಮೇಲಿದ್ದ ಕಾರಣ same teacher continued. So also punishment for ರಘು ಮತ್ತು ಶೀನಿ! ಇದು ಯಾಕೋ too much ಆಯಿತಲ್ವೆನೋ ಅಂತ ಹುಡುಗರು ಪಿಸ ಪಿಸ ಅಂತಂದ್ಕೊಳ್ತಿದ್ದಾಗ ಜವಾನ ಒಂದು ನೋಟೀಸನ್ನು ತಂದು ಟೀಚರ್ರಿಗೆ ಕೊಟ್ನಂತೆ ತದ ಪ್ರಕಾರ ರಘು ಮತ್ತು ಶೀನ (ಅದೇ that particular sheena) ರನ್ನು A ಸೆಕ್ಷನ್ನಿಗೆ transfer ಮಾಡಲಾಗಿತ್ತಂತೆ. ಇದನ್ನು ಕೇಳಿದ ಕೂಡಲೆ ಈ ಇಬ್ಬರು ಹುಡುಗರೂ ಹೈಜಂಪ್ - ಲಾಂಗ್‌ಜಂಪ್ ಕಾಂಬಿನೇಶನ್ ಮಾಡಿ ಆ ಕ್ಲಾಸಿನಿಂದ ಹಿಂದಕ್ಕೆ ತಿರುಗಿ ನೋಡದೆ ಓಡಿ ಹೋಗಿ 'A' ಸೆಕ್ಷನ್‌ನಲ್ಲಿ ಕೂತುಕೊಂಡುಬಿಟ್ರಂತೆ. ಇದರಿಂದ ಮತ್ತಷ್ಟು ಕುಪಿತರಾದ ಮೇಷ್ಟ್ರು ಬೆತ್ತ ಸಿಗಲಿಲ್ಲವಾದ ಕಾರಣ ತಮ್ಮ ಬೆಲ್ಟನ್ನೇ ಬಿಚ್ಚಿ ಅದನ್ನು ಠೀವಿಯಿಂದ ಬೀಸುತ್ತ ಆ ಹುಡುಗರ ಬೆನ್ನಟ್ಟಿ ಓಡಿದರಂತೆ. ಈ ಗಲಾಟೆಯನ್ನು ವೀಕ್ಷಿಸಲು ಸ್ಕೂಲಿಗೆ ಸ್ಕೂಲೇ 'A' ಸೆಕ್ಷನ್ ಮುಂದೆ ನೆರೆಯಿತಂತೆ.

ಆ ಗಲಾಟೆಲೂ ಸಿಂಹ ಗರ್ಜನೆ ಆ ಟೀಚರ್‌ದು "ಯಾರ ಪರ್ಮಿಶನ್‌ನಿಂದ ನೀವಿಬ್ಬರೂ ಬೆಂಚಿನಿಂದ ಕೆಳಗೆ ಇಳಿದ್ರಿ? ಕ್ಲಾಸಿನಿಂದ ಹೊರಗೆ ಹೋಗೊಕ್ಕೂ ಪರ್ಮಿಶನ್ ಯಾರು ಕೊಟ್ರು, ನಡೀರಿ" ಅಂತ! ಎಲ್ಲಾ ಥಂಡಾ ಆದ ನಂತರ ಹುಡುಗರು ಕೊಟ್ಟ ಉತ್ತರ "ನಾವು 'B' ಸೆಕ್ಷನ್‌ನಲ್ಲಿದ್ದಾಗ ಆ Punishment valid ಇತ್ತು, ಈಗಲ್ಲ ಸಾ. ಮತ್ತೆ ನಾವೆಂದಿಗೂ ಆ ಸೆಕ್ಷನ್‌ಗೆ ಬರೊಲ್ಲಸಾ!"

ಇದು ಕೇಳಿದ ಮೇಲೆ ನಮ್ಮವರಿಗೆ ಅವರ ಸ್ನೇಹಿತನ ನೆನಪು ಚೆನ್ನಾಗಿ ಬಂತು. ನಾನು ನಕ್ಕೂ ನಕ್ಕು ಸುಸ್ತು ಹೊಡೆದಿದ್ದೆ. ಏನು brainwave ಹೊಳೆಯುತ್ತೆ ಮಕ್ಕಳ ಮನಸ್ಸಿಗೆ!

★★★

ಶಬ್ದದರ್ಪಣಂ

– ಬಿ.ಆರ್. ನಾಗೇಶ್

ಕನ್ನಡ ಸಿನೇಮಾ ರಂಗದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿದ ''ಓ ನನ್ನ ನೀರೇ, ನೀ ನನ್ನ ಅಪ್ಸರೇ, ಆ ಸೀರೆ ಜಾರೆ, ಆಹಹಾ - ಅಹೊಹೊ - ಒಹೊಯೊ'' ಎಂಬ ಹಾಡು ಧ್ವನಿವರ್ಧಕದ ಸರ್ವಶಕ್ತಿಯೊಡನೆ ಆಕಾಶ - ಭೂಮಿಯನ್ನು ಅದ್ವೈತ ಮಾಡಿ ವುಡಿಗ್ಯೆಯುತ್ತಿತ್ತು. ದೊಡ್ಡವೇದಿಕೆ - ವೇದಿಕೆಯ ಹಿಂಭಾಗದಲ್ಲಿ ಗದ್ಯ ಇಲ್ಲದಿರುವ ರಾಜಕಾರಣಿಗಳ ದೊಡ್ಡ ದೊಡ್ಡ ಚಿತ್ರಗಳು ಅವರೆಲ್ಲರ ಗುರುತಾಗುವುದು ಅವರು ಧರಿಸಿದ ವಸ್ತುಗಳಿಂದಲೆ ಹೊರತು ಅವರ ಮುಖಚರ್ಯೆಯಿಂದಲ್ಲ. ಉದಾ - ಕೋಟು ಮತ್ತು ಗುಲಾಬಿ; ಕನ್ನಡಕ ಮತ್ತು ನಗೆ; ದಪ್ಪ ಕನ್ನಡಕ ಇತ್ಯಾದಿ. ಈ ಚಿತ್ರಗಳ ಮೇಲ್ಭಾಗದಲ್ಲಿ ''ಅಖಿಲಭಾರತ ಲಂಚ ನಿರೋಧ ಸಂಘ ಸ್ಥಾಪನೆ 1947'' ಎಂಬ ದೊಡ್ಡ ದೊಡ್ಡ ಅಕ್ಷರಗಳ ಬರಹ. ವೇದಿಕೆಯ ಎದುರು ಭಾಗದಲ್ಲಿ ಸಾವಿರಾರು ಕುರ್ಚಿಗಳು, ಎತ್ತಲು ಸುಲಭ ಕುರ್ಚಿಗಳು, ಬಿತ್ತಲು ಸುಲಭ ಕುರ್ಚಿಗಳು. ಆ ಕುರ್ಚಿಗಳ ವೈಶಿಷ್ಟ್ಯವೆಂದರೆ, ಒಂದು ಬಾರಿ ಅದರಲ್ಲಿ ಕುಳಿತರೆ, ಮೇಲೇಳಲು ಮನಸ್ಸು ಬಾರದೆ ಇರುವುದು.

ಇದೇನು ರಾಜಕೀಯ ಸಭೆ ಅಲ್ಲ - ಮಂತ್ರಿಗಳು ಬರುತ್ತಾರೆ, ನಿಜ-ಭಾಷಣ ಮಾಡುತ್ತಾರೆ - ಆದರೂ ರಾಜಕೀಯ ಇಲ್ಲಿಲ್ಲ. ಇಲ್ಲಿಯ ವಾತಾವರಣ ವೇದಕಾಲದಷ್ಟು ಪವಿತ್ರವಾದದ್ದು; ಉಪನಿಷತ್ ಕಾಲದಷ್ಟು ಗಮ್ಯ - ಹಚ್ಚಿಟ್ಟಿದ್ದ ಸಾವಿರಾರು ಊದು ಬತ್ತಿಗಳು ಅಂಥಾ ವಾತಾವರಣ ಸೃಷ್ಟಿಸಿದ್ದವು. ಇಲ್ಲೀಗ ಸರಸ್ವತಿಯ ಹೊಸ ರೂಪದ ಅನಾವರಣ ಆಗಲಿದೆ. ವೇದಿಕೆಯ ಮೇಲೆ, ಪ್ರೇಕ್ಷಕರ ಬಲಬದಿಯಲ್ಲಿ ದೊಡ್ಡದೊಂದು ಬೋರ್ಡ್ ಇದೆ - ಅದಕ್ಕೆ ರೇಶ್ಮೆ ಬಟ್ಟೆ ಹೊದಿಸಿರುತ್ತಾರೆ. ಆ ರೇಶ್ಮೆ ಬಟ್ಟೆಯನ್ನು ಸರಿಸಿ, ಅದ್ಭುತವೊಂದನ್ನು ಉದ್ಘಾಟಿಸಿದ್ದಾರೆ ರಾಜ್ಯದ ಮುಖ್ಯಮಂತ್ರಿಗಳೊಬ್ಬರು. ಆ ರೇಶ್ಮೆ ಬಟ್ಟೆಯ ಹಿಂದೆ ಏನಿರಬಹುದು ಎಂದು, ಅಷ್ಟರಲ್ಲಿಯೇ ಸಿನೆಮಾ ಹಾಡು ಕೇಳಿ ಅಮಲು ಏರಿಸಿಕೊಂಡಿದ್ದ ಪ್ರೇಕ್ಷಕ ವರ್ಗ, ತಮ್ಮ ತಮ್ಮೊಳಗೆ ಚರ್ಚಿಸುತ್ತಿದ್ದರು - ಸ್ವಲ್ಪ ಮಟ್ಟಿಗೆ ಬಾಜಿ ಕಟ್ಟುವ ಕೆಲಸವೂ ನಡೆಯಿತು. ಕೆಲವು ಮೊಬೈಲ್‌ಗಳು ಕಿರುಗುಟ್ಟಿದವು. ಸಮಾರಂಭವನ್ನು ಏರ್ಪಡಿಸಿದವರು ''ಸೀರೆ, ಅಪ್ಸರೆ, ಜಾರೆ'' ಹಾಡಿನ ನಡುವೆ ಪ್ರೇಕ್ಷಕರಿಗೆ ಸೂಚನೆ ಕೊಟ್ಟರು.

''ಮಂತ್ರಿವರ್ಯರು ಈಗತಾನೇ ಮನೆಯಿಂದ ಹೊರಟಿದ್ದಾರೆ; ಇಂದು ಬೆಳಗ್ಗೆ ಅವರು ಹಾಸಿಗೆಯಿಂದ ಮೇಲೇಳುವಾಗಲೇ ತಡವಾಗಿತ್ತು - ಕಾರಣ ನಿನ್ನೆ

ರಾತ್ರಿ ಅಮೆರಿಕದಿಂದ ಬಂದಿದ್ದ ಒಂದು ವ್ಯಾಪಾರಿ ನಿಯೋಗದೊಡನೆ ವ್ಯಾಪಕ, ಅಮೃತ ಮಾತಕತೆ ನಡೆದಿತ್ತು. ಇದೇನು, ಈಗ ಬಂದುಬಿಡುತ್ತಾರೆ. ಅವರ ಮನೆಯಿಂದ ಇಲ್ಲಿ ತನಕದ ರಸ್ತೆ ಖಾಲಿಯಾಗಿದೆ. ಪೋಲೀಸರ ಕೆಲಸ ಅಷ್ಟು ಅಚ್ಚುಕಟ್ಟು''.


ಪ್ರೇಕ್ಷಕರು ತಮ್ಮ ತಮ್ಮ ಕೈ ಗಡಿಯಾರ ನೋಡಿಕೊಂಡರು ಗಂಟೆ ಹನ್ನೊಂದು.

ಅಂತೂ ಹನ್ನೊಂದುವರೆಗೆ ಸರಿಯಾಗಿ ಮಂತ್ರಿ ಬಂದರು. ಸಭಿಕರೆಲ್ಲರೂ ಎದ್ದುನಿಂತರು. ಸ್ನಾಯುವಿನ ಹಿಡಿತದ ನೋವಿನಿಂದ ಸೊಂಟವನ್ನು ಬೇರ್ಪಡಿಸಲು ಇದೊಂದು ಸುಸಂದರ್ಭವೆಂದು, ಪ್ರೇಕ್ಷಕವರ್ಗದಲ್ಲಿದ್ದ ಮದುಕ ಮುದುಕಿಯರೂ ಎದ್ದು ನಿಂತರು. ಚಪ್ಪಾಳೆ. ''ಸತ್ಯನಿಷ್ಠ ಮಂತ್ರಿಗಳಿಗೆ ಜಯವಾಗಲಿ. ಸಂಪೂರ್ಣ ಮಾನವತಾವಾದಿ ಮಂತ್ರಿಯವರಿಗೆ ಜಯವಾಗಲಿ. ಗಾಂಧೀಜಿಕಿ ಜೈ, ನೆಹ್ರೂಕಿ ಜೈ. ಲಂಚ ನಿರೋಧಕ್ಕೆ ಧಿಕ್ಕಾರ - (ಕೂಡಲೇ ಸ್ವರ ಬದಲಾಯಿಸಿ ಲಂಚ ನಿರೋಧಕ್ಕೆ ಜೈಕಾರ) ಹೀಗೆ ಸಿನೇಮಾ ಹಾಡಿನೊಳಗೆ ಸೇರಿಕೊಂಡು ಉದ್ಘೋಷಿಗಳು ಮೊಳಗುತ್ತಿದ್ದಂತೆ, ಮಂತ್ರಿಯವರು ವೇದಿಕೆ ಏರಿದರು. ತಮ್ಮ ಜನ್ಮಸಿದ್ಧ ಹಕ್ಕು ಎಂಬ ರೀತಿಯಲ್ಲಿ ವೇದಿಕೆಯ ಮಧ್ಯೆ ಇದ್ದ, ನಾಟಕ ಸಿಂಹಾಸನದಲ್ಲಿ ಕುಳಿತರು. ಬಳಿಕ ಒಂದು ಗ್ಯಾಸ್ ಅಂಡೆಯಷ್ಟು ಬಾರದ ಹೂ ಹಾರವನ್ನು ಮಂತ್ರಿಗಳ ಕುತ್ತಿಗೆಗೆ ತೂಗಿಬಿಡಲಾಯಿತು. ಹಾರದೊಡನೆ ಮಂತ್ರಿಗಳ ಫೋಟೋ ತೆಗೆಯುವ ವೇಳೆ, ಇನ್ನೆರಡು ಮುಖಗಳೂ ಹಾರದೊಳಗೆ ತೂರಿಕೊಂಡಿದ್ದವು.

ಅಂದಿನ ಸಭೆಯನ್ನು ಏರ್ಪಡಿಸಿದವರಿಂದ ಪ್ರಾರಂಭ ಭಾಷಣ; ಮಂತ್ರಿಗಳಿಂದ ತೊಡಗಿ, ವೇದಿಕೆಯ ಮೇಲೆ ಇದ್ದಬದ್ದವರಿಗೆಲ್ಲಾ ವಂದನೆ ಅರ್ಪಿಸಿ, ಇಂದಿನ ಸಮಾರಂಭದ ಕುರಿತಾದ ವಿಷಯ ಮಂಡನೆಗೆ ಅವರು ತೊಡಗಿದಾಗ ಅರ್ಧಗಂಟೆ ಕಳೆದಿತ್ತು. ಅವರ ಪ್ರಾಸ್ತಾವಿಕ ಭಾಷಣದಲ್ಲಿ ಮಂತ್ರಿಗಳಿಗೆ ಅರ್ಪಿಸಿದ ಗ್ಯಾಸ್ ಅಂಡೆ ತೂಕದ ಹೂ ಹಾರವನ್ನು ಉದಾರವಾಗಿ ಕೊಟ್ಟವರಿಗೂ, ಅವರ ಕುಟುಂಬದವರಿಗೂ ಸಕಲ ಸೌಭಾಗ್ಯವನ್ನು ಮೂರು ನಾಮದ ದೇವರು ಕೊಡಲಿ ಎಂದು ಆಶಿಸಲು ಮರೆಯಲಿಲ್ಲ ಕಾರ್ಯಕರ್ತರು.

''ಸಭಿಕರೇ, ಇಂದು ಲಂಚವೆಂಬುದು ಸಾರ್ವಜನಿಕ ಸೊತ್ತಾಗಿದೆ. ಲಂಚವಿಲ್ಲದೆ ಯಾವುದೂ ಸಾಧ್ಯವಿಲ್ಲ ಎಂದಾಗಿದೆ. ಅದರ ಪ್ರಭಾವ ಸಮಾಜದ ಮೇಲೆ ಎಷ್ಟು ಅಡಗಿದೆಯೆಂದರೆ, ಪಂಚಧಾತುಗಳಷ್ಟು, ಪಂಚಧಾತುಗಳೆಂದರೆ ಏನೆಂದು ನಿಮಗೆಲ್ಲರಿಗೂ ತಿಳಿದಿದೆ. ಕಾರಣ ನೀವೆಲ್ಲರು ಅದನ್ನು

ಉಪಯೋಗಿಸುತ್ತಿದ್ದೀರಿ. ಒಂದರಿಂದ ಐದು ಅಂಕೆಗಳ ಪ್ರಭಾವವೇ ಪಂಚಧಾತುಗಳು. ಭಿಕ್ಷುಕ, ಬೀದಿ ಬದಿಯಲ್ಲಿ ನೀರುಳ್ಳಿ ಮಾರುವವ, ಪೋಲೀಸರಿಗೆ ಕೊಡುವುದು ಒಂದು - ಎಂದರೆ ಹತ್ತು ರೂಪಾಯಿ; ಸರಕಾರಿ ಆಸ್ಪತ್ರೆಯಲ್ಲಿ ಎಕ್ಸ್‌ರೇ ತೆಗೆಯಬೇಕಾದರೆ ಕೊಡಬೇಕಾದದ್ದು ಎರಡು - ಎಂದರೆ ನೂರು ರೂಪಾಯಿ; ಸರಕಾರಿ ಕಚೇರಿಗಳಲ್ಲಿ ಮೇಲಧಿಕಾರಿಗಳ ಸಹಿ ಬೇಕೆಂದಾದರೆ ಮೂರು ಎಂದರೆ ಐನೂರು ರೂಪಾಯಿ; ನಿಮ್ಮ ವಿದ್ಯುತ್ ಬಿಲ್ ಕಡಿಮೆ ಮಾಡಬೇಕಾದರೆ ನಾಲ್ಕು ಎಂದರೆ ಒಂದು ಸಾವಿರ ರೂಪಾಯಿ; ನಿಮಗೆ ಬೇಕಾದ ಊರಿಗೆ, ಬೇಡಿದ ಕುರ್ಚಿಗೆ ವರ್ಗವಾಗಬೇಕಾದರೆ ಐದು - ಎಂದರೆ ಐದು ಸಾವಿರ ರೂಪಾಯಿ - ಕೊಡಲೇ ಬೇಕಾದದ್ದು ಈಗ ಧರ್ಮವಾಗಿದೆ. ಪರಮಾತ್ಮ ಇದ್ದಾನೆ ಎಂಬುವುದು ಎಷ್ಟು ಸತ್ಯವೋ, ಅಷ್ಟೇ ಸತ್ಯ ಈ ಮಾಮೂಲಿಗಳ ಬೆಲೆ ಕೂಡಾ. ಇಲ್ಲಿ ಅರ್ಧಕ್ಕೆ ಬೆಲೆ ಇಲ್ಲ; ಉದಾ: ಒಂದುವರೆ - ಮೂರುವರೆ ಇತ್ಯಾದಿ. ಲಂಚವೆಂಬುದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಹೊಟ್ಟೆನೋವು ಗುಣವಾಗಬೇಕಾದರೂ ಲಂಚ; ತನಗೆ ಹೊರಲಾರದಷ್ಟು ಭಾರದ ಬ್ಯಾಗನ್ನು ಬೆನ್ನ ಮೇಲೆ ಹೊತ್ತುಕೊಂಡು ಶಾಲೆಗೆ ವಿದ್ಯಾರ್ಥಿ ಹೋಗಬೇಕಾದರೂ ಲಂಚ. ಈ ಲಂಚವೆಂಬ ಶಬ್ದ ಕೇಳಿ ಕೇಳಿ ನಮಗೆಷ್ಟು ಬೇಸರವಾಗಿದೆ ಎಂದರೆ ಇಷ್ಟು ಒಳ್ಳೆಯ ಒಂದು ಧರ್ಮಕಾರ್ಯಕ್ಕೆ ಇಂಥಾ ಒಂದು ಕಳಪೆ, ನೀಚ, ಮಾನಗೆಟ್ಟ ಹೆಸರೇ - ಎಂದು ಸಂಶಯ ಬರುವಷ್ಟು; ವಿಷಾದಿಸುವಷ್ಟು.



ನಾವು ಉಸಿರಾಡುವ ಗಾಳಿ ನಮಗೆಷ್ಟು ಮುಖ್ಯವೋ, ನೀರು ಎಷ್ಟು ಮುಖ್ಯವೋ, ವಿಸ್ಕಿ ಎಷ್ಟು ಮುಖ್ಯವೋ - ಅಷ್ಟೇ ಮುಖ್ಯ ಈ ಲಂಚ ಕೂಡಾ. ನಮ್ಮ ಜೀವನದ ಅವಿಭಾಜ್ಯ ಅಂಗವಾಗಿರುವ ಇದನ್ನು ಹೋಗಲಾಡಿಸಬೇಕಾದದ್ದು ನಮ್ಮ ಕರ್ತವ್ಯವಾದರೂ, ಯಾಕೆ ಹೋಗಲಾಡಿಸಬೇಕು ಎಂಬ ಪ್ರಶ್ನೆಗೆ ಮೊದಲು ಉತ್ತರ ಕಂಡುಹಿಡಿಯಬೇಕು. ಎಲ್ಲಿಯತನಕ ನಮ್ಮ ದೇಶದ ಸರಾಸರಿ ಆದಾಯ ಹೆಚ್ಚುತ್ತಾ ಹೋಗುತ್ತದೆಯೋ, ಎಲ್ಲಿ ತನಕ ಸರಕಾರ ಪೋಷಕಾಂಶಗಳನ್ನು ಜನತೆಗೆ ಪುಕ್ಕಟೆಯಾಗಿ ಕೊಡುತ್ತದೆಯೋ, ಅಲ್ಲಿತನಕ ಇದನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಹಾಗಾಗಿ ನಾವು ಮಾಡಬಹುದಾದ ಅತಿ ಮುಖ್ಯ ಮತ್ತು ಪ್ರಾಮಾಣಿಕ ಪ್ರಯತ್ನವೆಂದರೆ, ಲಂಚವೆಂಬ ಅಹಿತಕರ, ಹೇಸಿಗೆ ಶಬ್ದವನ್ನು ನಮ್ಮ ದಿನನಿತ್ಯದ ಬಳಕೆಯಿಂದ ತೆಗೆದು ಹಾಕುವುದು. ಅದರ ಬದಲಾಗಿ ಬಡವ ಬಲ್ಲಿದ ಎಂಬ ಬೇಧವಿಲ್ಲದೆ ಉಪಯೋಗಿಸಲು ಸಾಧ್ಯವಾಗುವಂಥ ಒಂದು ಶಬ್ದವನ್ನು ಬಳಸುವುದು. ಇಂಥಾ ಒಂದು ಸಮಾಜ ಸುಧಾರಣಾ ಶಕ್ತಿಯುಳ್ಳ, ಭಾಷಾ ಮರ್ಯಾದೆಯನ್ನು ಕಾಪಾಡಿಕೊಳ್ಳಬಲ್ಲ ಸಾರ್ವಜನಿಕ ಆರೋಗ್ಯಕ್ಕೆ ಅತಿ ಮುಖ್ಯವಾದ ಒಂದು ಶಬ್ದವನ್ನು ಈದಿನ ಮಂತ್ರಿಗಳು ಉದ್ಘಾಟಿಸಲಿದ್ದಾರೆ. ಇಂಥಾ ಒಂದು ಜೀವಂತ ಶಬ್ದದ ಉದ್ಘಾಟನೆಗಾಗಿ ಬಂದಿರುವ ನಿಮಗೆಲ್ಲರಿಗೂ ಧನ್ಯವಾದಗಳು'' ಎಂದು ಪ್ರಾಸ್ತಾವಿಕ ಭಾಷಣ ಮುಗಿಸಿದ.

ಬಳಿಕ ನಾಟಕ ಸಿಂಹಾಸನದಿಂದ ಮಂತ್ರಿಗಳು ಮೇಲೆದ್ದು ಘನಗಾಂಭೀರ್ಯದಿಂದ ಎದುರಿಗಿರುವ ವಿಡಿಯೋ ಫೋಟೋಗ್ರಾಫರನ್ನು ನೋಡಿ ನಗುತ್ತಾ, ವೇದಿಕೆಯ ಮೇಲೆ ಮುಸುಕು ಹಾಕಿ ನಿಂತಿರುವ ಮಾಯಾಂಗನೆಯ ಬಳಿ ಸರಿದರು. ಅವರ ಒಂದೊಂದು ಹೆಜ್ಜೆಗೂ ಬಾಡಿಗೆಯ ಘೋಷಣೆಗಳು ಸಿಡಿದವು. ನಮ್ಮ ದೇಶಕ್ಕಾಗಿ ಯಾರೆಲ್ಲ ತ್ಯಾಗ ಮಾಡಿರುವರೋ, ಅವರೆಲ್ಲರ ಜನ್ಮ ನಕ್ಷತ್ರದ ಹಿರಿತನವನ್ನು ಉಳಿಸಿಯೆ ಘೋಷಣೆಗಳು ಮೊಳಗಿದವು. ಮಂತ್ರಿಗಳು ಮುಸುಕು ಹಾಕಿರುವ ಮಾಯಾಂಗನೆಯ ಬಳಿ ನಿಂತು, ಪ್ರೇಕ್ಷಕರಿಗೆ ಕೈಮುಗಿದು, ಮೆಲ್ಲನೆ ಮುಸುಕು ಸರಿಸಿದರು. ಚಪ್ಪಾಳೆಗಳ ನಡುವೆ.

ಲಂಚ=ಜಿಲೇಬಿ

ಎಂದು ಬೋರ್ಡಿನ ಮೇಲೆ ಬಿಳಿ ಪೈಂಟಿನಲ್ಲಿ ಬರೆದಿತ್ತು. ಜನರಿಗೆ ಸಂತೋಷವೇ ಸಂತೋಷ. ಲಂಚದ ಬದಲಾಗಿ ಇನ್ನು ಉಪಯೋಗಕ್ಕೆ ಬರಲಿರುವ ಜಿಲೇಬಿ ಶಬ್ದವನ್ನು ಕಂಡೇ ಬಾಯಿಯಲ್ಲಿ ನೀರೂರಿತು.

ಜನರ ಚಪ್ಪಾಳೆ ನಿಲ್ಲಬೇಕಾದರೆ, ಅವರ ಎಂಜಲು ನುಂಗುವ ಕಾರ್ಯಕ್ರಮ ನಿಲ್ಲಬೇಕಾದರೆ ಹದಿನೈದು ನಿಮಿಷಗಳೇ ಬೇಕಾದವು. ಬಳಿಕ ಸ್ವಯಂ ಸೇವಕರು ಇಡಿಯ ಸಭೆಗೆ ಜಿಲೇಬಿ ಹಂಚಿದರು. ಜಿಲೇಬಿಗೆ ರೇಟು ಆಗಲೇ ನಿಶ್ಚಯವಾಯಿತು - ಹೇಗೆಂದರೆ ಜನರಿಗೆ ಕೊಟ್ಟ ಪುಟ್ಟ ಪ್ಲಾಸ್ಟಿಕ್ ಚೀಲದಲ್ಲಿ ಒಂದು ಜಿಲೇಬಿ ಮತ್ತು ಒಂದು ರೂಪಾಯಿ ನಾಣ್ಯ ಇತ್ತು - ಎಂದರೆ ಒಂದು ರೂಪಾಯಿ ಎಂದರೆ ಒಂದು ಜಿಲೇಬಿ ಎಂದಾಯಿತು. ಮಂತ್ರಿಗಳಿಗೂ ಒಂದು ಪುಟ್ಟ ಪ್ಲಾಸ್ಟಿಕ್ ಚೀಲ ಸಿಕ್ಕಿತು. ಅವರು ಅದನ್ನು ತೆಗೆದು, ಒಂದು ರೂಪಾಯಿನಾಣ್ಯವನ್ನು ಪ್ರೇಕ್ಷಕರಿಗೆ ತೋರಿಸಿ, ಅದನ್ನು ತನ್ನ ಬಗಲ ಕಿಸೆಗೆ ಇಳಿಬಿಟ್ಟು, ಜಿಲೇಬಿಯನ್ನು ಜನರ ಎದುರೇ ಬಾಯಿಯೊಳಗೆ ಲೀಲಾಜಾಲವಾಗಿ ಹೊಗಿಸಿದರು. ಸಭೆ "ಜಿಲೇಬಿ ಮಹಾರಾಜ್‌ಕೀ ಜೈ" ಎಂದಿತು. ಬಳಿಕ ಮಂತ್ರಿಗಳ ಭಾಷಣ:

"ಸಭಿಕರೇ, ಲಂಚ ನಿರೋಧ ಸಂಘದವರ ಪರಿಶ್ರಮ ಮೆಚ್ಚುವಂಥದ್ದು. 1947 ರಿಂದ ನಾವು ಉಪಯೋಗಿಸಿಕೊಳ್ಳುತ್ತಾ ಬಂದಿರುವ ಲಂಚ ಎಂಬುದು ಈಗ ತನ್ನ ಗುರುತು ಕಾಣದಷ್ಟು ಸವೆದು ಹೋಗಿದೆ. ಚಲಾವಣೆಯಲ್ಲಿ ಇದ್ದೂ ಇದ್ದೂ ನಾಣ್ಯ ಹೇಗೆ ಸವೆದು ಹೋಗುತ್ತದೆಯೋ, ಶಬ್ದಗಳೂ ಹಾಗೆಯೆ ಸವೆಯುತ್ತವೆ. ಇಂಥಾ ಸಂದರ್ಭಗಳಲ್ಲಿ ಹೊಸ ಶಬ್ದಗಳನ್ನು ಬಳಸಬೇಕಾಗುತ್ತದೆ. ನಿರೋಧದವರು ಲಂಚದ ಬದಲು ಜಿಲೇಬಿ ಶಬ್ದವನ್ನು ಇಡಿಯ ದೇಶದಲ್ಲಿ ಚಲಾವಣೆಗೆ ತರಲು ನಿಶ್ಚಯಿಸಿದ್ದಾರೆ - ಹಾಗೆಂದು ಪ್ರತಿಜ್ಞೆ ತೆಗೆದುಕೊಂಡಿದ್ದಾರೆ. ಈ ಶಬ್ದ ಕಠೋರವಲ್ಲ; ಇದರಲ್ಲಿ ಖಾರವಿಲ್ಲ - ಬೇಸರವಿಲ್ಲ - ಬದಲಾಗಿ ಸಿಹಿಯಾಗಿದೆ. ಇನ್ನು ಮುಂದೆ ಯಾರಾದರೂ ನಾನು ಅವನಿಗೆ ನೂರು ರೂಪಾಯಿ ಲಂಚಕೊಟ್ಟೆ ಎಂದು ಹೇಳಬೇಕಾಗಿ ಇಲ್ಲ; ಬದಲಾಗಿ ನಾನು ಅವನಿಗೆ ನೂರು ಜಿಲೇಬಿ ಕೊಟ್ಟೆ ಎನ್ನಬೇಕು. ಒಂದು ಜಿಲೇಬಿ ಎಂದರೆ ಒಂದು ರೂಪಾಯಿ ಎಂದು ಈಗಲೇ ತೀರ್ಮಾನವಾಗಿರುವುದರಿಂದ ಇಡಿಯ ದೇಶದಲ್ಲಿ ಇನ್ನು ಮುಂದೆ ಜಿಲೇಬಿ ಪ್ರಸರಣ ಸಮಗ್ರವಾಗಿ ಆಗಲಿ ಎಂದು ಹಾರೈಸುತ್ತೇನೆ, ಎಂದು ಸಿಂಹಾಸನದಲ್ಲಿ ಕುಳಿತರು.


ಯಾವ ರಾಜಕೀಯ ನಾಯಕರ ಸಭೆಯಿಂದಲೂ ಇಷ್ಟು ಪ್ರೇಕ್ಷಕರು ಇಷ್ಟು ಸಂತುಷ್ಟರಾಗಿ ತಮ್ಮ ತಮ್ಮ ಮನೆಗೆ ಹಿಂತಿರುಗಿ ಹೋಗಿ ಇರಲಾರರು.

ಮುಂದಿನ ನಾಲ್ಕು ದಿನಗಳೊಳಗಾಗಿ ಜಿಲೇಬಿ ಶಬ್ದ ಎಷ್ಟು ವ್ಯಾಪಕವಾಗಿ ಹರಡಿತು ಎಂದರೆ, ಪ್ರಾಂತದ ಎಲ್ಲಾ ಪ್ರಮುಖ ದೈನಿಕಗಳಲ್ಲಿ ಕೆಳಕಂಡ ರೀತಿಯಲ್ಲಿ ಸುದ್ದಿಗಳು ಪ್ರಕಟಗೊಂಡವು:

ಒಂದುವರೆ ಸಾವಿರ ಜಿಲೇಬಿ ತಿಂದ ತಹಶೀಲ್ದಾರರ ಬಂಧನ ಮತ್ತು ಕೂಡಲೇ ಬಿಡುಗಡೆ; ಅವರು ತಿಂದ ಜಿಲೇಬಿಯನ್ನು ಅವರ ಬಾಯೊಳಗೆ ಕೈಹಾಕಿ ವಾಂತಿ ಮಾಡಿಸಲಾಗಿದೆ.

ಐವತ್ತು ಸಾವಿರ ಜಿಲೇಬಿಗೆ ಒಂದು ಸರಕಾರಿ ನೌಕರಿ ಖರೀದಿಸಲಾಯಿತು. ಒಂದುವರೆ ಲಕ್ಷ ಜಿಲೇಬಿಯಿಂದ ಒಬ್ಬ ಇಂಜಿನಿಯರ್ ದೋಷಮುಕ್ತನಾದ. ಜಿಲೇಬಿ ಶಬ್ದವನ್ನು ಭಾರತ ದೇಶಕ್ಕೆ ಕೊಟ್ಟ ಮಂತ್ರಿವರ್ಯರು ಐದು ಲಕ್ಷ ಜಿಲೇಬಿ ತಿಂದು, ತಮ್ಮ ಹೊಟ್ಟೆ ಕೆಡಿಸಿಕೊಳ್ಳದಿದ್ದರೂ, ಯದ್ವಾತದ್ದಾ ಹೊಡೆದುಕೊಳ್ಳಲು ತೊಡಗಿದ ಎದೆಬಡಿತದ ಹೆದರಿಕೆಯಿಂದ, ಅಮೆರಿಕಾಕ್ಕೆ ಹೋಗುವ ತಯಾರಿಯಲ್ಲಿ ಇದ್ದಾಗಲೇ, ತಾನು ಏಕೆ ರಂಭೆ ಊರ್ವಶಿಯರ ಭರತನಾಟ್ಯ ಜಗಲ್‌ಬಂದಿ ನೋಡಬಾರದು - ಎಂದು ಯೋಚಿಸಿ ಯೋಚನೆಯನ್ನು ಕಾರ್ಯಗತ ಮಾಡಿಯೇಬಿಟ್ಟರು.

ಭಾರತದ ಪ್ರಜಾಪ್ರಭುತ್ವ ರಾಜಕೀಯದಲ್ಲಿ, ಎಲ್ಲಾ ಪ್ರಜೆಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂಬ ಉದ್ದೇಶದಿಂದ, ಮುಂದಿನ ಚುನಾವಣೆ ಮೇಲೆ 'ಜಿಲೇಬಿ ಪಾರ್ಟಿ' ಎಂಬ ಒಂದು ರಾಜಕೀಯ ಪಕ್ಷ ಹುಟ್ಟಿಕೊಳ್ಳಲೂಬಹುದು.



ಎಲ್ಲಾ ಮಕ್ಕಳ ತರಹ ನೀನೂ ಕಂಪ್ಯೂಟರ್ ಮುಂದೆ
ಕೂತ್ಕೋಬಾರ್ದೇನೋ?

ನೆರಳುಗಳು

– ಶಿವು

ಮೊನ್ನೆ ಸಂಜೆ ಬೀದಿಯಲ್ಲಿ ನಡೆದು ಹೋಗುತ್ತಿದ್ದಾಗ ದೂರದಲ್ಲಿ ರೆಡ್ಡಿ ಬರುತ್ತಿದ್ದುದು ಕಂಡಿತು. ನಾನು ಗಾಬರಿಯಿಂದ ಬೆವತು ಹೋದೆ. ರೆಡ್ಡಿ ನನ್ನ ಪರಮಾಪ್ತ ಮಿತ್ರ. ಸಾಧಾರಣವಾಗಿ ನಾನು ಅವನ ಭೇಟಿಗೆ ಉತ್ಸುಕನಾಗಿರಬೇಕು. ಆದರೆ ಇಂದು ಪರಿಸ್ಥಿತಿ ಸ್ವಲ್ಪ ಬದಲಾಗಿತ್ತು. ಅಂಥಾದ್ದೇನಿಲ್ಲ. ಹಿಂದೊಮ್ಮೆ ನಾನು ಅವನಿಂದ ನೂರು ರೂಪಾಯಿ ಸಾಲ ಪಡೆದಿದ್ದೆ. ಇನ್ನೂ ತೀರಿಸಲಾಗಿರಲಿಲ್ಲ. ತೀರಿಸುವ ಸ್ಥಿತಿಯಲ್ಲೂ ಇರಲಿಲ್ಲ. ಹಾಗಾಗಿ ಇಷ್ಟು ದಿನವೂ ಅವನ ಕಣ್ಣು ತಪ್ಪಿಸಿ ಓಡಾಡುತ್ತಿದ್ದೆ. ಹಾಳಾದ್ದು ಆ ಬೀದಿಯಲ್ಲಿ ಪಕ್ಕದ ಗಲ್ಲಿಗಳೂ ಇರಲಿಲ್ಲ. ರೆಡ್ಡಿ ಬಂದೇ ಬಿಟ್ಟ. ''ಬರೋದು ಬಂದೆ, ಲಕ್ಷಣವಾಗಿ ಗಲ್ಲಿಗಳಿರೋ ರಸ್ತೇಲಿ ಸಿಗಬಾರದಿತ್ತೇನೋ ರೆಡ್ಡಿ, ಈಗ ನೋಡು ಗಲ್ಲಿ ಬಿದ್ದು ತಪ್ಪಿಸಿಕೊಂಡು ಹೋಗುಕ್ಕೂ ಆಗ್ತಿಲ್ಲ'' ಅಂತ ನಗೆಚಾಟಿಕೆ ಮಾತನ್ನಾಡಿದೆ.


''ನಿನ್ನ ನೆರಳಿನಿಂದ ನೀನು ತಪ್ಪಿಸಿಕೊಳ್ಳುಕ್ಕಾಗುತ್ತೇನೋ? ಹಾಗೇನೇ ನಾನೂ ಸಹ. ದುಡ್ಡು ಕೊಡದ ಮಾತ್ರಕ್ಕೆ ನನ್ನ ಮುಖ ನೋಡೋದೇ ನಿಲ್ಲಿಸಿಬಿಟ್ಟಿದೀಯಲ್ಲಾ. ಇದೇನಾ ನಮ್ಮ ಸ್ನೇಹಕ್ಕೆ ಇರೋ ಬೆಲೆ?'' ಅಂತ ವಿಶ್ವಾಸದಿಂದ ಮಾತನಾಡಿದ ರೆಡ್ಡಿ. ಭೂಮಿ ಬಿರಿದಿದ್ದರೆ ಸಾಕು, ಅದರಲ್ಲಿ ಇಳಿಯಲು ತಯಾರಿದ್ದೆ ನಾನು ಆಗ. ಅಂತೂ ಹೇಗೋ ರೆಡ್ಡಿಯೊಂದಿಗೆ ಮಾತು ಮುಗಿಸಿ ಮುಂದೆ ನಡೆದಾಗ ಸಂಜೆ ಆರಾಗಿತ್ತು. ರೆಡ್ಡಿಯ ಮಾತುಗಳು ನನ್ನ ಕಿವಿಯಲ್ಲಿ ಗುಣುಗುಣುಸುತ್ತಿತ್ತು. ನಿಜವಾಗಲೂ ನಮ್ಮ ನೆರಳಿನಿಂದ ನಾವು ತಪ್ಪಿಸಿಕೊಳ್ಳಲಾಗದೇ? ಅದೇನು ಬಿಡುಗಡೆಯಿಲ್ಲದ ಬಂಧನವೇ? ಈ ಹಕ್ಕು ನೆರಳಿಗೆ ಸಿಗಲು ಕಾರಣವಾದರೂ ಏನು? ಎಂಬೆಲ್ಲಾ ಆಲೋಚನೆಗಳು ಮನದಲ್ಲಿ ಹಾದು ಹೋದವು. ಮೆಲ್ಲಗೆ ನನ್ನ ನೆರಳಿನ ಕಡೆ ಕಣ್ಣು ಹಾಯಿಸಿದೆ. ಸಂಜೆಯ ಸೂರ್ಯ ಬೆನ್ನನ್ನು ಬೆಚ್ಚಗಿಟ್ಟಿದ್ದ. ನನ್ನ ನೆರಳು ನನ್ನ ಮುಂದೆ ಉದ್ದಕ್ಕೆ ಸೈಂಧವನಂತೆ ನಡೆದು ಹೋಗುತ್ತಿತ್ತು.

ವಾನರಶ್ರೇಷ್ಠ ಹನುಮಂತ ಸೀತೆಯನ್ನು ಹುಡುಕಿಕೊಂಡು ಸಮುದ್ರ ಹಾರಿದಾಗ, ಸಮುದ್ರದಲ್ಲಿ ಅಡಗಿದ್ದ ಸಿಂಹಿಕೆಯೆಂಬ ರಾಕ್ಷಸಿ ಹನುಮಂತನ ನೆರಳನ್ನೇ ಸೆರೆಹಿಡಿದು ಅವನ ಹಾರಾಟವನ್ನು ಸ್ಥಗಿತಗೊಳಿಸಿದಳಂತೆ. ಹನುಮಂತನಿಗೆ ಲಂಕೆಯನ್ನು ಸೇರಿ ಸೀತೆಯನ್ನು ಹುಡುಕುವ ತವಕ. ಇದೆಲ್ಲಿಯ

ಕಂಟಕ ಎಂದುಕೊಂಡು ತನ್ನ ದೇಹವನ್ನು ಸಿಂಹಿಕೆ ನುಂಗಲಾರದಂತೆ ದೊಡ್ಡದಾಗಿ ಬೆಳೆಸಿದನಂತೆ ಸಿಂಹಿಕೆ ಕಾಮರೂಪಿಣಿ. ತನ್ನ ಬಾಯನ್ನು ಪಾತಾಳದಂತೆ ದೊಡ್ಡದಾಗಿ ತೆರೆದಳು. ಹನುಮಂತ ಸಮಯಸ್ಫೂರ್ತಿಯಿಂದ ತನ್ನ ದೇಹವನ್ನು ತಕ್ಷಣ ಅಣುಮಾತ್ರಕ್ಕೆ ಕುಗ್ಗಿಸಿ, ಸಿಂಹಿಕೆಯ ಬಾಯೊಳಗೆ ಹಾರಿ ಹೊರಬಂದನಂತೆ. ಇಷ್ಟೆಲ್ಲಾ ತೊಂದರೆ ಯಾಕೆ? ಈಗಿನ ಕಾಲದ ವಿಮಾನಗಳಂತೆ ಮೋಡಗಳ ಮೇಲೆ ಹಾರಿದ್ದರೆ ಹನುಮಂತನ ಹಾರಾಟ, ದೂರದರ್ಶನದವರು ಹೇಳುವಂತೆ ''ಋುಖಾವಟ್'' ಇಲ್ಲದೇ ಸುಲಲಿತವಾಗಿ ನಡೆಯಬಹುದಾಗಿತ್ತಲ್ಲವೇ. ಅದು ಹೇಗೇ ಇರಲಿ, ಅಂತಹ ಹನುಮಂತನಿಗೇ ತನ್ನ ನೆರಳಿನಿಂದ ಬಿಡುಗಡೆ ಇಲ್ಲದ ಮೇಲೆ, ಮಿಕ್ಕ ಪಾಮರರ ಮಾತೇನು!

ನೆರಳಿನಂತೆ ಬೆಂಬಿಡದೆ ಹಿಂಬಾಲಿಸುವ (ಅಥವಾ ಮುಂಬಾಲಿಸುವ) ಪ್ರಾಣಿಗಳೆಂದರೆ, ಯುಧಿಷ್ಠಿರನ ನಾಯಿ, ಮೇರಿಯ ಕುರಿಮರಿ ಹಾಗೂ ನಕ್ಷತ್ರಿಕ. ನಕ್ಷತ್ರಿಕ ಪ್ರಾಣಿಯೇ ಎಂದು ನೀವು ಮೂಗು ಮುರಿಯಬಹುದು. ವರಮಾನ ತೆರಿಗೆಯವರು ಗೋಳಾಡಿಸುವಂತೆ, ಹರಿಶ್ಚಂದ್ರನ ಪ್ರಾಣಹಿಂಡಿ ಮಾನವೀಯತೆಯೇ ಇಲ್ಲದವನನ್ನು ಮನುಷ್ಯ ಎಂದು ಗುರುತಿಸಬಹುದೇ, ನೀವೇ ಹೇಳಿ. ಆದರೂ, ನಕ್ಷತ್ರಿಕನನ್ನು ಪೂರ್ಣವಾಗಿ ನಿಂದಿಸಲಾಗದು. ಎಷ್ಟಾದರೂ ಅವನು ತನ್ನ ಬಾಸ್ ಹೇಳಿದ ಆಜ್ಞೆಯನ್ನು ಶಿರಸಾ ಪಾಲಿಸುತ್ತಿದ್ದ ಅಷ್ಟೇ. ಪಾಲನೆಯಲ್ಲಿ ಅತೀ ಉತ್ಸಾಹ ತೋರಿದ್ದು ನಿಜ. ಆದರೆ ಅದು ಕರ್ತವ್ಯನಿಷ್ಠೆ ಎಂದು ಅವ ಪ್ರತಿವಾದ ಮಾಡಬಹುದಲ್ಲವೇ. ಮೇರಿಯ ಕುರಿಮರಿಯ ಪರಿಸ್ಥಿತಿ ಬೇರೆ. ಅದು ಮೇರಿ ಹೋದಲ್ಲೆಲ್ಲಾ ಹೋಗುತ್ತಿತ್ತಂತೆ. ಅದರಿಂದ ಮೇರಿಯ ನೆಚ್ಚಿನ ಸ್ನೇಹಿತನಿಗಾದ ಕಳವಳ, ಮುಜುಗರ, ನಿರಾಸೆಗಳನ್ನ ಯಾರಾದರೂ ಊಹಿಸಬಹುದು. ಆದರೂ ಈ ಕುರಿಮರಿ ತನ್ನದೇ ಆದ ಅಭಿಮಾನೀ ಬಳಗವನ್ನು ಹೊಂದಿದೆ. ನಮ್ಮ ಪಕ್ಕದ ಮನೆಯ ಗಿರಿಜಮ್ಮ ನನ್ನ ಮನೆಯಾಕೆಯ ಹತ್ತಿರ ''ಕಾಂಪೌಂಡ್ ಗೋಡೆ'' ಸಂಭಾಷಣೆ ನಡೆಸಿದ್ದಾಗ ನಾನು ಹಿತ್ತಲಲ್ಲಿ ಕಳೆ ಕೀಳುತ್ತಿದ್ದೆ. ಗಿರಿಜಮ್ಮನವರ ಕಂಚಿನ ಕಂಠ ಅಲ್ಲಿಗೆ ಸ್ಪಷ್ಟವಾಗಿ ಕೇಳುತ್ತಿತ್ತು. ''ನಮ್ಮ ಯಜಮಾನ್ರು ಕೈಗೇ ಸಿಗೋಲ್ಲಾರೀ. ಬೆಳಗಾಗೆದ್ದು ವಾಕಿಂಗೂ, ಕ್ಲಬ್ಬೂ, ಇಸ್ಪೀಟೂ ಅಂತ ಹೊರಟುಬಿಟ್ರೆ, ಸಂಜೆಗೆ ಮನೇಗೆ ಬರೋದು. ನಿಮ್ಮೆಜಮಾನ್ರು ದಿವಿನಾದ ಮನುಷ್ಯ ಕಣ್ರೀ. ಮೇರಿ ಕುರೀಮರಿ ತರಹ ಕಮಕ್ಕಿಮಕ್ ಅನ್ನದೇ ಕರೆದಲ್ಲೆಲ್ಲಾ ನಿಮ್ಮನ್ನ ಹಿಂಬಾಲಿಸ್ತಾರೆ.'' ಕೀಳುತ್ತಿದ್ದ ಕಳೇನ ಹಾಗೇ ತಿರುಚಿ ಎಸೆದೆ. ಯುಧಿಷ್ಠಿರನ ನಾಯಿ ಅವನನ್ನ ಹಿಂಬಾಲಿಸಿದ್ದು ಸ್ವರ್ಗಾರೋಹಣದ ಸಮಯದಲ್ಲಿ. ಅದೊಂದು ಮಹತ್ವಾಕಾಂಕ್ಷೆಯ ನಾಯಿ. ಒಂದೇ ಏಟಿಗೆ ಅದು ಸದೇಹ ಮುಕ್ತಿಗೆ ಕೈ, ಅಲ್ಲ ಬಾಯಿ ಹಾಕಿತ್ತು. ಧರ್ಮಜನ ಕೃಪೆಯಿಂದ ಅದರ ಆಸೆಯೂ ಕೈಗೂಡಿತೂ ಅನ್ನಿ.

ಈ ನೆರಳಿನ ದೆಸೆಯಿಂದಾಗಿ ಮೊನ್ನೆ ಸ್ವರ್ಗಲೋಕದಲ್ಲಿ ಬಿಸಿಬಿಸಿ ಚರ್ಚೆಯಾಗಿ ಮಾರಾಮಾರಿಯ ಹಂತಕ್ಕೆ ಹೋದ ವಿಷಯ ಗೊತ್ತೇನು? ಆದದ್ದಿಷ್ಟು. ಇಂದ್ರನ ಸಭೆಯಲ್ಲಿ ಗಣ್ಯರೆಲ್ಲಾ ಆಸನಾಸೀನರಾಗಿದ್ದರು. ಒಮ್ಮೆಲೇ ರಾಹು ಕೇತುಗಳ ಆಗಮನ. ಇಂದ್ರನ ಮುಂದೆ ರಾಹು ತನ್ನ ದೂರನ್ನು ಮಂಡಿಸಿದ. 'ಅನೂಚಾನವಾಗಿ ನಡೆದು ಬಂದಿರುವ ಪದ್ಧತಿಯಂತೆ ನಿನ್ನೆ ನಾನು ಚಂದ್ರನನ್ನು ನಿಧಾನವಾಗಿ ನುಂಗಿ ನನ್ನ ಕರ್ತವ್ಯವನ್ನ ಮಾಡಿದೆ. ಆದರೆ ಭೂಲೋಕದ ಜನ ಭಕ್ತಿಯಿಂದ ವ್ರತವನ್ನು ಪಾಲಿಸುವುದನ್ನು ಬಿಟ್ಟು, 'ರಾಹು, ಕೇತು ಎಲ್ಲಾ ಸುಳ್ಳು, ಇದೆಲ್ಲಾ ಕೇವಲ ಭೂಮಿಯ ನೆರಳು ಚಂದ್ರನ ಮೇಲೆ ಹಾಯುವುದರಿಂದಾಗುವ ಪರಿಣಾಮ ಅಷ್ಟೇ ಎಂದೆಲ್ಲಾ ಮಾತನಾಡಿ ನಮ್ಮ ತೇಜೋವಧೆ ಮಾಡಿದ್ದಾರೆ. ಇವರನ್ನು ಶಿಕ್ಷಿಸುವರೇ ಇಲ್ಲವೇ' ಎಂದು ಹಲುಬಿದನಂತೆ. ಸೂರ್ಯ, ಚಂದ್ರ ಗ್ರಹಣಗಳು ಸಂಭವಿಸುವುದು ನೆರಳುಗಳ ಪ್ರಭಾವದಿಂದ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದ್ದರೂ ಇತರ ಕಾಯಗಳ ಮೇಲೆ ನೆರಳಿನ ಪರಿಣಾಮದ ಬಗ್ಗೆ ನನಗೆ ಹೊಸ ಅರಿವು ಮೂಡಿದ್ದು ಇತ್ತೀಚೆಗೆ. ನನ್ನ ಮಿತ್ರ ರೆಡ್ಡಿಯ ನೆರಳು ನನ್ನಕಾಯದ ಮೇಲೆ ಬೀಳುವಂತಾದಾಗ ನನಗೇ ಗ್ರಹಣ ಹಿಡಿದ ಕುರಿತು ಈಗಾಗಲೇ ತಿಳಿಸಿದ್ದೇನೆ. ಇಂತಹ ಪರಿಣಾಮಗಳನ್ನು ಕುರಿತು ಇನ್ನೂ ಅನೇಕ ವೈಜ್ಞಾನಿಕ ಪ್ರಯೋಗಗಳಾಗಬೇಕಾದ್ದು ಅತ್ಯಗತ್ಯ.



ಜನಪ್ರಿಯ ಕ್ವಿಜ್ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಕೇಳುವ ಪ್ರಶ್ನೆಯೆಂದರೆ ''ನಿನ್ನ ನೆರಳನ್ನು ನೀನೇ ತುಳಿಯಲಾದೀತೇ?'' ಎಂಬ ಪ್ರಶ್ನೆ. ನೆರಳನ್ನು ತುಳಿಯಲು ಮುಂದೆ ಸರಿದರೆ ನೆರಳೂ ಸಹ ಅಷ್ಟೇ ದೂರ ಮುಂದೆ ಸರಿಯುವ ಪ್ರವೃತ್ತಿಯನ್ನು ಕಂಡು ಈ ಪ್ರಶ್ನೆ ಉದಿಸಿರಬಹುದು. ಇದರಲ್ಲಿ ಕ್ವಿಜ್ ಮಾಸ್ಟರ್ ಮರೆತಿರುವ ಸಂಗತಿಯೆಂದರೆ, ನಮ್ಮ ಪಂಜಾಬೀ ಮಿತ್ರರು ಹೇಳುವ ''ಬಾರಾ ಬಜೆ''. ಮಧ್ಯಾಹ್ನ ಹನ್ನೆರಡು ಘಂಟೆಯ ಹೊತ್ತಿಗೆ ನಮ್ಮ ನೆರಳು ನಮ್ಮ ಕಾಲ ಕೆಳಗೇ ಬಂದು ನಿಲ್ಲುವುದರಿಂದ ಅದನ್ನು ಅತಿ ಸುಲಭವಾಗಿ ಕಾಲಿನಿಂದ ಮರ್ದಿಸಬಹುದು. ಇನ್ನೊಂದು ಪ್ರಶ್ನೆ ನೆರಳಿನ ಬಣ್ಣಕ್ಕೆ ಸಂಬಂಧಿಸಿದ್ದು. ಇದೇನು, ನೆರಳಿಗೆ ಬಣ್ಣ ಬೇರೆ ಇರುತ್ಯೇ, ಎಲ್ಲಾ ನೆರಳುಗಳೂ ಕಪ್ಪೇ ಅಲ್ಲವೇ ಅಂತ ಆಶ್ಚರ್ಯ ಪಡಬೇಡಿ. ನೀವು ಸಿನಿಮಾನೇ ನೋಡಿಲ್ಲ ಅಂತ ಜನ ತಿಳಿದಾರು. ಸಿನಿಮಾದ ರಜತ ಪರದೆಯ ಮೇಲೆ ನೀವು ನೋಡುವ ಪಾತ್ರಗಳೆಲ್ಲಾ ಏನು ಅಂದುಕೊಂಡಿದ್ದೀರಿ? ಅವರೆಲ್ಲಾ ಕೇವಲ ನೆರಳುಗಳೇ ತಾನೆ. ಮಾಧುರೀ ದೀಕ್ಷಿತ್‌ಗೆ ಬಣ್ಣ ಇಲ್ಲ ಅಂತ ಯಾವ ಕುರುಡ ಹೇಳ್ತಾನೆ, ಹೇಳಿ.

ಚರಿತ್ರೆ ಪಾಠದಲ್ಲಿ ಅಶೋಕ ಚಕ್ರವರ್ತಿ ಏನು ಮಾಡಿದ ಅಂತ ಕೇಳಿದರೆ, ಸಾಲು ಮರ ನೆಡೆಸಿದ ಅಂತ ಥಟ್ಟನೆ ಉತ್ತರ ಬರುತ್ತೆ. ಹಾದಿಯಲ್ಲಿಸಾಗುವ ಪ್ರಯಾಣಿಕರಿಗೆ ಸುಸ್ತಾದಾಗ ಮರದ ನೆರಳಿನಲ್ಲಿ ದಣಿವನ್ನ ಪರಿಹರಿಸಿ ಕೊಳ್ಳೋದಕ್ಕೆ ಸಾಲು ಮರ ನೆಡೆಸೋದು ಹಿಂದಿನ ಕಾಲದ ರಾಜಮಹಾ ರಾಜರುಗಳ ಪರಿಪಾಠ. ಇಂತಹ ನೆರಳು ಆಶ್ರಯ ನೀಡುವ ನೆರಳು. ಇದಕ್ಕೆ ಗ್ರಹಣದ ಛಾಯೆಯಿಲ್ಲ. ಅಂದಹಾಗೆ ಛಾಯೆ ಸಹಾ ಸೂರ್ಯನ ನೆರಳೇ ತಾನೆ. ನಾಳೀಜಂಘವೆಂಬ ಬಕಪಕ್ಷಿ ತಾನು ವಾಸಿಸುತ್ತಿದ್ದ ಮರದ ನೆರಳನ್ನು ಆಶ್ರಯಿಸಿದ ಗೌತಮನಿಗೆ ಅತಿಥಿ ಸತ್ಕಾರ ಮಾಡಿದ್ದು ಈ ಸಂಪ್ರದಾಯದ ಪ್ರಾಚೀನತೆಗೆ ನಿದರ್ಶನ. ಸುಪ್ರಸಿದ್ಧ ಕವಿ 'ರತ್ನ'ರು ಹಾಡಿರುವಂತೆ 'ಸುತ್ತಾ ಸಾಯೋ ಬಿಸಿಲಿನ್ ಚಾಪೇ, ಅಲ್ಲಲ್ಲೇ ವಸಿ ನೆರಳಿನ್ ತೇಪೇ' ಎಂಬ ಸಾಲು ನೆರಳಿನ ಪ್ರಾಮುಖ್ಯತೆಯನ್ನ ಕವಿವಾಣಿಯಲ್ಲಿ ತಿಳಿಸುತ್ತದೆ. ಈಜಿಪ್ಟಿನ ಜನರಿಗೆ ನೆರಳು ಒಂದು ವೈಜ್ಞಾನಿಕ ಉಪಕರಣವಾಗಿ ನೆರವಿಗೆ ಬಂತು. ಮಾನವನ ನಾಗರೀಕತೆಯ ಉಗಮದಲ್ಲಿ ಕಾಲದ ಅಳತೆಗೆ ಈ ಜನ ನೆರಳು ಗಡಿಯಾರಗಳನ್ನು ಬಳಸುತ್ತಿದ್ದರಂತೆ. ರಾತ್ರಿಯ ನೆರಳು ಚಟುವಟಿಕೆಗಳಿಗೆ ಈ ಗಡಿಯಾರಗಳು ಎಷ್ಟರಮಟ್ಟಿಗೆ ಸಹಾಯಕವಾಗುತ್ತಿದ್ದವು ಎಂಬ ಸಂಗತಿ ಸದ್ಯಕ್ಕೆ ಅಪ್ರಸ್ತುತ.

ನನ್ನ ಚಿಕ್ಕಂದಿನಲ್ಲಿ ನಾನು ಮಿಡ್ಲ್ ಸ್ಕೂಲಿನಲ್ಲಿ ಓದುತ್ತಿದ್ದಾಗ ಫ್ರೀಲಾನ್ಸ್ ಜಾದೂಗಾರರು, ಮಿಮಿಕ್ರಿ ಪರಿಣಿತರು ನಮ್ಮ ಸ್ಕೂಲಿಗೆ ಬಂದು ಮಧ್ಯಾಹ್ನದ ಕೊನೇ ಪಿರಿಯಡ್ಡನ್ನು ಮೊಟಕುಮಾಡಿಸಿ ನಮ್ಮೆಲ್ಲರಿಂದ ತಲಾ ನಾಲ್ಕಾಣೆ ಕಿತ್ತು,


ನಮಗೆ ತಮ್ಮ "ಕಲಾ ಪ್ರದರ್ಶನ"ವನ್ನು ನೀಡಿ ರಂಜಿಸುತ್ತಿದ್ದರು. ಒಮ್ಮೆ ಇಂತಹ ಒಂದು ಕಾರ್ಯಕ್ರಮದಲ್ಲಿ ಒಬ್ಬ Shadow Play ಪರಿಣಿತ ನಮ್ಮ ಸ್ಕೂಲಿಗೆ ಬಂದಿದ್ದ. ಬೊರವಾದ ಗುಂಗುರು ಕೂದಲು, ಕಟ್ಟುಮಸ್ತಾದ ಕುಸ್ತಿಪಟುವಿನ ದೇಹ. ಈ ನೆರಳಿನ ಆಟವನ್ನು ನೋಡಲು ಆ ಮಧ್ಯಾಹ್ನ ನಾವೆಲ್ಲಾ ಸ್ಕೂಲಿನ ಅಂಗಣದಲ್ಲಿ ಸೇರಿದ್ದೆವು. ವೇದಿಕೆಯ (ವೇದಿಕೆ ಏನು ಬಂತು, ಎರಡು ಬೆಂಚುಗಳನ್ನು ಸೇರಿಸಿ, ಅದರ ಮೇಲೆ ಒಂದು ಜಮಖಾನೆ ಹಾಸಿ ನಿರ್ಮಿಸಿದ್ದ ಒಂದು ವ್ಯವಸ್ಥೆ ಅಷ್ಟೇ) ಮುಂದೆ ಒಂದು ಬಿಳೀ ಪರದೆ (ಯಾರದೋ ಪಂಚೆ). ಆಟ ಶುರುವಾದಾಗ ನಮ್ಮ ಜಟ್ಟಿ ತೆರೆಯ ಹಿಂದೆ ಮರೆಯಾದ. ಒಮ್ಮೆಲೇ ಪರದೆ ಬೆಳಕಿನಿಂದ ತುಂಬಿತು. ಒಂದು ಮೂಲೆಯಿಂದ ಒಂದು ನಾಯಿ ಬೊಗಳಲು ಪ್ರಾರಂಭಿಸಿತು. ಜಟ್ಟಿಯ ಕೈಚಳಕದಿಂದ ತೆರೆಯ ಮೇಲೆ ನಾಯಿಯ ತಲೆಯ ನೆರಳು ಎಂದು ತಿಳಿದಿದ್ದರೂ ಆ ಕ್ಷಣದಲ್ಲಿ ಆ ನೆರಳಿನಾಟಕದಲ್ಲಿ ಮೈಮರೆತಿದ್ದೆವು. ನಾಯಿಯ ನಂತರ ಒಬ್ಬ ತರುಣಿ. ಆಕೆ ಹುಲ್ಲಿನ ಮೇಲೆ ಕುಳಿತು ತಲೆಯಾಡಿಸಿದಾಗಲಂತೂ ಅಂಗಣದಲ್ಲಿ ಸೀಟಿಗಳ ಸುರಿಮಳೆ. ತಕ್ಷಣ ಪರದೆಗೆ ಕಟ್ಟಿದ್ದ ದಾರ ತುಂಡಾಗಿ ಪರದೆ ಕೆಳಗೆ ಬಿತ್ತು. ನಮ್ಮ ಜಟ್ಟಿ ತನ್ನ ತಲೆಯ ಹೊರವಾದ ಕೂದಲಿನ ಮೇಲೆ ಎರಡೂ ಕೈಗಳ ಬೆರಳುಗಳ ನಾಟ್ಯವಾಡಿಸುತ್ತಾ ನಮ್ಮ ಸ್ವಪ್ನ ಸುಂದರಿಯನ್ನು ಸೃಷ್ಟಿಸಿದ್ದ.

ನೆರಳಿನ ಅಳತೆ ಎಂದಿಗೂ ಒಂದೇ ಇರುವುದಿಲ್ಲ. ಬೆಳಗಿನ ಸೂರ್ಯನ ಬೆಳಕಿನಡಿಯಲ್ಲಿ ಐದಡಿ ಇರುವ ನೆರಳು ರಾತ್ರಿ ಸೀಮೆ ಎಣ್ಣೆ ಬುಡ್ಡಿಯ ಮಂದ ಪ್ರಕಾಶದಲ್ಲಿ ಗೋಡೆಯ ಮೇಲೆ ದೈತ್ಯ ರೂಪ ತಾಳುತ್ತದೆ. ಬೆಳಕಿನ ಅಂಶ ಕಡಿಮೆಯಾದಂತೆ ನೆರಳಿನ ಕರಾಳ ದೈತ್ಯತನ ಬೆಳೆಯುವುದು ಪ್ರಕೃತಿಯ ನಿಯಮವೇನೋ, ಯಾರು ಬಲ್ಲರು. ಖ್ಯಾತ ನಗೆಸಾಹಿತಿ ರಾಶಿ ಒಮ್ಮೆ ಸಂಜೆಯ ವಾಕಿಂಗ್ ನಡೆಸಿದ್ದರಂತೆ. ಹಾದಿಯ ಬೀದೀ ದೀಪದ ಬೆಳಕಿನಲ್ಲಿ ಚಪ್ಪಲಿ ಸರಿಮಾಡಿಕೊಳ್ಳಲು ಒಂದು ನಿಮಿಷ ನಿಂತರಂತೆ. ದಾರಿಯುದ್ದಕ್ಕೂ ಚಾಚಿದ್ದ ಅವರ ನೆರಳು ಸ್ಥಬ್ಧವಾಗಿ ನಿಲ್ಲದೇ, ಜೋರಾಗಿ ಹಾಗೂ ಹೀಗೂ ತುಯ್ದಾಡಲು ಪ್ರಾರಂಭಿಸಿತಂತೆ. ಒಂದು ಕ್ಷಣ ರಾಶಿಯವರಿಗೆ ಝುಂಗಾಬಲವೇ ಉಡುಗಿಹೋಯಿತಂತೆ. ಆಮೇಲೆ ಹಿಂದೆ ತಿರುಗಿ ನೋಡಿದಾಗ ಅಡ್ಡ ತಂತಿಗೆ ಬಿಗಿದಿದ್ದ ಬೀದೀ ದೀಪ ಬೀಸುತ್ತಿದ್ದ ಗಾಳಿಗೆ ಅಲುಗಾಡುತ್ತಿತ್ತಂತೆ.

'ಆ ಕ್ಷಣ ಹೊಸದೊಂದು ಸತ್ಯ ನನಗೆ ಗೋಚರವಾಯಿತು. ನೆರಳಿನ ಆಟಕ್ಕೆ ನಾನು ಪ್ರೇರಕನಲ್ಲ. ನನ್ನ ಹಿಂದಿರುವ ಯಾವುದೋ ಕಾಣದ ಶಕ್ತಿಯ ತಾಳಕ್ಕೆ ನನ್ನ ನೆರಳು ಕುಣಿದರೆ, ನಾನು ಭವಣೆಪಡುವುದು ಮೂಢತನ. ದೈವದ

ಪ್ರೇರಣೆಯಿಂದ ನನ್ನ ಬದುಕು ಹೊಯ್ದಾಡಿದಾಗ ನನ್ನ ಆತ್ಮ ನಿಶ್ಚಲವಾಗಿರುವಂತಾದರೆ, ಬಾಳದೆಷ್ಟು ಹಸನು' ಎನ್ನುತ್ತಾರೆ ರಾಶಿ.

ಅನೇಕ ಮಹಾಪುರುಷರು ಮಾನವ ಸಮಾಜದ ಪ್ರಗತಿಗೆ ಕಾರಣಭೂತರು. ಅವರುಗಳು ಕಂಡ ಸತ್ಯ ಮತ್ತು ಅದರ ಪ್ರಖರ ನೆರಳು ಇಂದಿಗೂ ಕೋಟ್ಯಾಂತರ ಜನಗಳಿಗೆ ಸಾಂತ್ವನದ ಚಿಲುಮೆ. ಒಂದು ದೃಷ್ಟಿಯಲ್ಲಿ ನಾವೆಲ್ಲಾ ಆ ಜಗನ್ನಿಯಾಮಕನ ನೆರಳುಗಳೇ ಅಲ್ಲವೇ?



ಫೇಕ್ ಸಿ.ಇ.ಟಿ. ಪ್ರಶ್ನೆ ಪತ್ರಿಕೆ ಮಾರಿದೋರ್ನ
ನ್ಯೂ ಬಿಸಿನೆಸ್ ಆಪರ್ಚುನಿಟೀಸ್ ಕೋರ್ಸ್‌ನ ಫ್ಯಾಕಲ್ಟೀಗೆ
ಸೇರಿಸ್ಕೋಬೇಕು ಕಣೋ....

ಬೇಕಾಗಿದ್ದಾರೆ....

– ನೀರಗುಂದ ಕೇಶವಮೂರ್ತಿರಾವ್

ಪ್ರತಿನಿತ್ಯ ಪೇಪರ್ ಬಂದ್ಕೂಡ್ಲೆ 'ಬೇಕಾಗಿದ್ದಾರೆ' ಕಾಲಂ ನೋಡುವ ನಿರುದ್ಯೋಗಿಗಳ ಸಂಖ್ಯೆ ಕಡಿಮೆ ಏನಿಲ್ಲ. ನಮ್ಕಾಲ್ದಲ್ಲಿದ್ದಂಗೆ ಈಗ wanted ಕಾಲಂ ಕಡೆ ಕಣ್ಣಾಯ್ಸೋರು ಕಡ್ಮೆ. ಈಗೆಲ್ಲಾ walk-in-ಇಂಟರ್‌ವ್ಯೂ! ಸುಮ್ನೆ ಹಾಗೆ ದನಗಳು ಸುತ್ತಾಡ್ಕೊಂಬಂದ್ಹಾಗೆ! 'ಹೀಗೆ ಹೋಗಿ ಹಾಗೆ ಬರ್‍ತಾರೆ' ಇಲ್ದಿದ್ರೆ ಇದ್ದೆ ಇದೆಯಲ್ಲ 'ಇ-ಮೇಲ್' 'ಇಂಟರ್‌ನೆಂಟ್' ಕೂತ್ಕಡೆ ಮಾಹಿತಿ ದೊರೆಯುತ್ತೆ! ಆದ್ರೆ ಕೆಲ್ಸ? ತಿರುಗಲು ತಿಪ್ಪನಂತೆ ಅಲೆಯುವುದೇನೂ ತಪ್ಪಿದ್ದಲ್ಲ.

ಒಂದ್ಕಾಲದಲ್ಲಿ ಅಪರೂಪಕ್ಕೊಂದು 'ಬೇಕಾಗಿದ್ದಾರೆ' ಜಾಹಿರಾತು ನೋಡಿ ಇಂಟರ್‌ವ್ಯೂಗೆ ಹೋದಾಗ ಅಲ್ಲಿ ವಿಷಯಕ್ಕೆ ಸಂಬಂಧಿಸದ ಪ್ರಶ್ನೆಗೆ ಉತ್ತರಿಸಿ ಹೊರಕ್ಕೆ ಬಂದಾಗ ತನಗೇ ಆ ಕೆಲ್ಸ ಪಕ್ಕಾ ಎಂದುಕೊಂಡು ಮನೆಗೆ ಬಂದ ಕೆಲವು ದಿವಸಗಳ ನಂತರ ರಿಗ್ರೆಟ್ ಲೆಟರ್! ಕೊನೆಗೆ ಯಾವ್ದೊ ಓದಿಗೆ ಸಂಬಂಧವಿಲ್ಲದ ಚಾಕ್ರಿಗ್ಸೇರಿ ಅದ್ರಲ್ಲೆ ಪ್ರಸಿದ್ಧಿ ಆದವರೂ ಉಂಟು!

ಇಂದಿನ ಕಂಪ್ಯೂಟರ್, ಐ.ಟಿ. ಪದವೀದರರ ಉದ್ಯೋಗ ಸಮಸ್ಯೆ ಇದ್ದರೂ ನಮ್ಕಾಲ್ದಲ್ಲಿ ಇದ್ದಂಗಿಲ್ಲ. ಇ-ಮೇಲ್ ನಲ್ಲೋ ಇಂಟರ್‌ನೆಟ್‌ನಲ್ಲೋ ಇದ್ದಲ್ಲೇ ಇಂಥಾ ಕಡೆ ಇಂಟರ್‌ವ್ಯೂ ಇದೆ ಎಂದು ತಿಳಿಯುತ್ತಾರೆ! ಬೆಳಿಗ್ಗೆ ಎದ್ದು ಹೊರಟ್ರೆ ಸಂಜೆ ಹೊತ್ಗೆ ಕೆಲ್ಸ ಸಿಗುತ್ತೆ/ಇಲ್ಲ ಅಂತಾ ಗೊತ್ತಾಗತ್ತೆ. ಪುನಃ ನಾಳೆ ಬೆಳಗ್ಗೆ ಮತ್ತೊಂದ್ಕಡೆ! ಹೇಗೋ "ಗುಡಾರ್ದಲ್ಲಿ ಆನೆ ಸೊಂಡ್ಲು ತೂರಿದ್ರೆ ಸಾಕು, ಆಮೇಲೆ ಮೈತೂರ್‍ಸೋದೇನೂ ಕಷ್ಟವಾಗಲ್ಲಾಂತ" ಕಂಪ್ಯೂಟರ್, ಐ.ಟಿ. ಪದವೀಧರ ಅಂಬೋಣ!

'ಬೇಕಾಗಿದ್ದಾರೆ' ಜಾಹಿರಾತಿನಲ್ಲಿ ಉದ್ಯೋಗಪತಿ ಅಪೇಕ್ಷಿಸುವ ಬೇಕು/ಬೇಡಗಳೇನೂ ಕಡಿಮೆ ಇರುವುದಿಲ್ಲ. ಹೆಸರು, ವಯಸ್ಸು, ವಿದ್ಯಾಭ್ಯಾಸ/ಉನ್ನತ ವಿದ್ಯಾಭ್ಯಾಸ ಅಲ್ಲದೇ ಮುಖ್ಯವಾಗಿ ಕನಿಷ್ಟ ಅನುಭವ!

'ಬೇಕಾಗಿದ್ದಾರೆ...' ಗೆ ಇತ್ತೀಚೆಗೆ ಸ್ವಯಂ ನಿವೃತ್ತಿ ಹೊಂದಿದ ಬ್ಯಾಂಕ್ ಅಧಿಕಾರಿಗಳಿಗೆ ಪುನಃ ಉದ್ಯೋಗಕ್ಕಾಗಿ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟವಾಗಿರುವುದನ್ನು ಕಾಣಬಹುದು!

''ಬೇಕಾಗಿದ್ದಾರೆ...'' ಜಾಹಿರಾತನ್ನು ನೋಡಿ, ನಿವೃತ್ತರಾದವರು ಪುನಃ ವೃತ್ತಿ ಮುಂದುವರೆಸುವರಿಗಿರುವ ಅವಕಾಶವನ್ನು ನಮ್ಮ ಪೌರಾಣಿಕ ವ್ಯಕ್ತಿಗಳು ಹೇಗೆ ಬಳಸಿಕೊಳ್ಳಬಹುದೆಂಬುದನ್ನು ಮಸಲಾ ಊಹಿಸಿದಾಗ ಕಣ್ಮುಂದೆ ನಿಂತ ಒಂದೆರಡು ಸಂದರ್ಶನದ ಮಾದರಿಗಳು ನಮ್ಮ ಓದುಗರಿಗೂ ಕಾಣಿಸಬಹುದಲ್ಲವೆ?

(ಕಾಲ್ಪನಿಕ) ಮುಖ್ಯ ಕಾರ್ಯಾಲಯವೊಂದಕ್ಕೆ ''ಶೀಘ್ರಲಿಪಿ'' ಹುದ್ದೆಗಾಗಿ ಅನುಭವವುಳ್ಳ ಅಭ್ಯರ್ಥಿಯು ''ಬೇಕಾಗಿದ್ದಾರೆ'' ''ಅಪೇಕ್ಷಿಗಳು ದಿನಾಂಕ.... ರಂದು ನೇರವಾಗಿ ಸಂದರ್ಶಿಸಬಹುದು'' ಎಂಬ ಪತ್ರಿಕಾ ಜಾಹಿರಾತನ್ನು ಕಂಡು ''ಇಂಟರ್‌ವ್ಯೂ''ಗೆ ಅಭ್ಯರ್ಥಿ ಆಗಮನ! ಸಂದರ್ಶಿಸಲು ಬಂದ ಅಧಿಕಾರಿಗೆ ತಬ್ಬಿಬ್ಬು! ಕೆಲಸಕ್ಕಾಗಿ ಬಂದ ಅಭ್ಯರ್ಥಿ ಮತ್ತಾರು ಅಲ್ಲ. ವೇದವ್ಯಾಸರು ಮಹಾಭಾರತವನ್ನು ಡಿಕ್ಟೇಟ್ ಮಾಡ್ದಾಗ ತನ್ನ ಶೀಘ್ರಲಿಪಿಯಿಂದ ಬರೆದುಕೊಂಡ ವಿನಾಯಕ! (ರಾಜರತ್ನ ಭಾಷೆಯಲ್ಲಿ ಹೇಳುವುದಾದರೆ ''ಮಾಬಾರ್ತ ಬರೆಯಾಕೆ ಯಾಸಂಗ್ ಇನಾಯ್ಕ ಸಿಕ್ಕಂಗೆ...'')

ಇಂತಹುದೇ ಇನ್ನೊಂದು ಪ್ರಸಂಗ. 'ಬೇಕಾಗಿದ್ದಾರೆ...' ಪ್ರಸಿದ್ಧ ನಾಟಕ ಕಂಪನಿಯ ಜಾಹಿರಾತು. ''ನಮ್ಮ ನಾಟಕ ಕಂಪನಿಯಲ್ಲಿ ಯಾವುದೇ ಪಾತ್ರ ವಹಿಸಲು ಅನುಭವಿ ನಟರು ಬೇಕಾಗಿದ್ದಾರೆ, ಆಸಕ್ತಿಯುಳ್ಳವರು ಮಾಲೀಕರನ್ನು ನೇರವಾಗಿ ಸಂದರ್ಶಿಸಬಹುದು'' ಈ ಜಾಹಿರಾತನ್ನು ಕಂಡು ಮಾಲೀಕರನ್ನು ಭೇಟಿ ಮಾಡಿದವರು ಮತ್ತಾರು ಅಲ್ಲ. ಮೀನು, ಆಮೆ, ಹಂದಿ ಮುಂತಾದ ದಶಾವತಾರಗಳನ್ನೆತ್ತಿದ, ಬ್ರಹ್ಮಾಂಡದ ರಂಗಭೂಮಿಯಲ್ಲಿ ವಿವಿಧ ಪಾತ್ರಗಳನ್ನು ಧರಿಸಿದ ನಟ-ನಾರಾಯಣ ಶ್ರೀ ಮಹಾವಿಷ್ಣು!

ಇಂತಹ ಸ್ವಾರಸ್ಯಗಳಿಗೆ ಕೊನೆ ಮೊದಲು ಇಲ್ಲ. ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಹಣಕಾಸು ಸಂಸ್ಥೆಯೊಂದು ''ಬೇಕಾಗಿದ್ದಾರೆ'' ಜಾಹಿರಾತು ಪ್ರಕಟಿಸಿತ್ತು. ''ಸಾಲದ ಬಾಕಿ ವಸೂಲು ಮಾಡಲು ಅನುಭವವುಳ್ಳ ಅಭ್ಯರ್ಥಿಗಾಗಿ''. ಈ ಕೆಲಸಕ್ಕೆ ''ಅಸೂಯೆ, ನೀಚವೃತ್ತಿ, ನಿರ್ದಾಕ್ಷಿಣ್ಯ, ನಿಷ್ಕರುಣೆ ನೀತಿಗಳಿಗೆ ಹೆಸರಾದ, ಹರಿಶ್ಚಂದ್ರನಿಂದ ಬಾಕಿ ವಸೂಲು ಮಾಡಲು ವಿಶ್ವಾಮಿತ್ರನಿಂದ ನಿಯುಕ್ತನಾದ ನಕ್ಷತ್ರಿಕನಂಥವನು'' ದೊರೆತಲ್ಲಿ ಬಾಕಿ ಇರುವ ಸಾಲ ಪಾವತಿಯಾಗಬಹುದೆಂದು ಕಾಣುತ್ತದೆ.

ಇದು ಮುಗಿಯದ ಕತೆ. ಆದರೂ ಇನ್ನೂ ''ಬೇಕಾಗಿದ್ದಾರೆ''.

ಡೆಲಿಗೇಷನ್ ಅಂದ್ರೆ ಇದು....

ಗುಂಡ ಮಾಡ್ಕೊಂಡ್ ಬಂದಿದ್ದ ಹೋಂವರ್ಕ್ ಬುಕ್ ನೋಡಿ ಮೇಷ್ಟ್ರಿಗೆ ರೇಗಿತು.

ಮೇಷ್ಟ್ರು: ಲೋ ಗುಂಡಾ ಏನೋ ಇದು

ಗುಂಡ: ಹೋಂವರ್ಕು ಸಾರ್

ಮೇಷ್ಟ್ರು: ತಲೆ ಹರಟೆ, ಅದು ನನಗೂ ಗೊತ್ತು. ಆದ್ರೆ ದಿನಾ ಗುಂಡಾಗಿ ಬರ್ಕೊಂಬರ್ತಿದ್ದ ಹೋಂ ವರ್ಕ್‌ನ ಇವತ್ತು ಕಾಗೆ ಕಾಲು, ಗೂಬೆ ಕಾಲಾಗಿ ಮಾಡ್ಕೊಂಬಂದಿದೀಯಲ್ಲ ಯಾಕೋ.

ಗುಂಡ: ಓ ಅದಾ... ನೆನ್ನೆ ಈರುಳ್ಳಿ ಹೆಚ್ಚುವಾಗಿ ಕೈ ಕುಯ್ದು ಹೋಯ್ತು

ಮೇಷ್ಟ್ರು: ನೀನ್ಯಾಕೋ ಈರುಳ್ಳಿ ಹೆಚ್ಕೋಕೆ ಹೋದೆ

ಗುಂಡ: ನಾನಲ್ಲ ಸಾರ್... ನಮ್ಮ ತಂದೆ ಹೆಚ್ತಾಯಿದ್ದಿದ್ದು

ಫೋನ್ ಕರೆ ಬಂದಾಗ...

- ವಿಜಯರಾಜಸುತ

ನನ್ನ ಏಕಮಾತ್ರ ಮೊಮ್ಮಗ ಅವರ ಅಮ್ಮನ ಜೊತೆಯಲ್ಲಿ ಪರೀಕ್ಷೆ ಮುಗಿದ ತಕ್ಷಣವೇ ಸಾಗರಕ್ಕೆ ಹೋಗಿ 3-4 ದಿನಗಳಾಗಿತ್ತು. ಬೆಳಿಗ್ಗೆ ಏಳು ಗಂಟೆ, ಆಗತಾನೆ ಎದ್ದು ಬಿಸಿ ಬಿಸಿ ಕಾಫಿ ಹೀರುತ್ತಾ ಪೇಪರ್ ಮೇಲೆ ಕಣ್ಣಾಡಿಸುತ್ತಿದ್ದೆ. ಫೋನ್ ಹೊಡೆದುಕೊಳ್ಳುವುದಕ್ಕೆ ಶುರುವಾಯಿತು. ಬೇಸರದಿಂದ ಥೂ, ಒಂದು ಗಳಿಗೆ ಕೂತು ಓದುವುದಕ್ಕೂ ನೆಮ್ಮದಿ ಕೊಡೊಲ್ಲ ಈ ದರಿದ್ರ ಫೋನು. ಒಳ್ಳೇ ಕೋಳಿತರಹ ಬೆಳಗಾಯಿತು ಅಂತ ನಮ್ಮನ್ನೆಲ್ಲಾ ತನ್ನ ಕೀರಲು ಕಂಠದಿಂದ ಬಡಿದೆಬ್ಬಿಸುತ್ತದೆ. ದರಿದ್ರದ್ದು'' ಅಂತ ಗೊಣಗುತ್ತಲೇ receiver ಕೈಗೆತ್ತಿದೆ. ಆ ಕಡೆಯಿಂದ ಸುಂದರ ಧ್ವನಿ, ''ತಾತಾ, ಹುಷಾರಾಗಿದೀಯಾ, ನಾನು ದೀಪು'' ಅಂತ ಕೇಳಿದ ತಕ್ಷಣವೇ ಗಂಟಿಕ್ಕಿದ್ದ ಹುಬ್ಬು ಸಡಿಲಗೊಳಿಸಿ, ಮುಖದಲ್ಲಿ ನಗೆ ತುಂಬಿ ಬಹಳ ವಾತ್ಸಲ್ಯದಿಂದ ನಾನು ''ಏನಪ್ಪಾ, ಮಗು, ಚನ್ನಾಗಿದೀಯಾ? ಮಾಮಾ, ಅನಿಲ ಅರುಣ ಎಲ್ಲ ಚನಾಗಿದಾರೇನೊ? ನೀನು ನಿನ್ನ ಊರಿಗೆ ಹೋದ ತಕ್ಷಣ ನಮ್ಮನ್ನೆಲ್ಲಾ ಮರೆತೇ ಬಿಡ್ತೀಯಾಂತಾ ಹೆದರಿ ಬಿಟ್ಟಿದ್ದೆ. ಆದರೆ ಈ ನಿನ್ನ Phone ಕರೆ ಕೇಳಿ ಮರೆತಿಲ್ಲಾಂತ ಗೊತ್ತಾಯ್ತು. ಏನು ಮಗು, ವಿಶೇಷ? ಹೇಳು ಮರಿ ಬೇಗ. ಇದು S.T.D. ಬೇರೆ Meter ಓಡುತ್ತೆ. ಆಮೇಲೆ ನಿನ್ನ ಅಮ್ಮ ಈ ತಾಂತಂಗೆ ಗ್ರಹಚಾರ ಬಿಡಿಸಿಬಿಡ್ತಾಳೆ'' ಅಂತ ಅಂದೆ.

ದೀಪುವಿನ ಧ್ವನಿ ಸಪ್ಪೆಯಾಗಿರುವಂತೆ ಅನಿಸಿತು. ಅವನು ನಿಲ್ಲಿಸಿ, ನಿಲ್ಲಿಸಿ, ''ತಾತಾ... ತಾತಾ... ಅದೂ... ನಾನು ನಾಳೇನೇ ಮೈಸೂರಿಗೆ ಬಂದು ಬಿಡ್ತೀದೀನಿ ತಾತಾ'' ಅಂದ.

''ಅದ್ಯಾಕೋ, ಇನ್ನೂ ಹೋಗಿ ಒಂದು ವಾರಾನೂ ಆಗಿಲ್ಲ ಯಾಕಪ್ಪಾ, ಏನಾಯ್ತಪ್ಪಾ ಮಗು? ಅಲ್ಲಿ ನಿನಗೆ ಏನು ತೊಂದರೆ ಆಯ್ತಪ್ಪಾ, ಅದಾದ್ರೂ ಹೇಳು'' ಅಂದೆ, ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತಾ.

ಪಕ್ಕದಲ್ಲೇ ಬಂದು ನಿಂತಿದ್ದ ನನ್ನ ಅರ್ಧಾಂಗಿಗೆ, ನಾನು ಏನೋ ಗಾಬರಿಯಾಗಿ ಹೇಳುತ್ತಿರುವುದೂ ಬೆಳಿಗ್ಗೆ 7 ಗಂಟೇಲೇ ಬೆವತು, ಒರೆಸಿಕೊಳ್ಳುತ್ತಿರುವುದನ್ನು ನೋಡಿ ಹೃದಯದ ಬಡಿತವೇ ನಿಂತುಹೋದಂತಾಗಿ,

''ರೀ ಯಾರದ್ರೀ ಫೋನ್? ಏನೋ ದೀಪು ಅಂತಿದೀರಾ, ಕಷ್ಟಾ ಅಂತಿದೀರಾ ಬೆವರತಾ ಇದೀರಾ ಏನ್ರಿ, ಇದೆಲ್ಲಾ? ನನಗೊಂದೂ ಅರ್ಥವೇ

ಆಗ್ತಿಲ್ಲಾ ಅಪ್ಪಾ, ನಂಡುಂಡೇಶ್ವರಾ, ಇವರ ಜೊತೇಲೇ ನಿನ್ನ ಸನ್ನಿಧಾನಕ್ಕೆ ಬಂದು, ನಿನ್ನ ಸೇವೆ ಮಾಡ್ತೀನಪ್ಪಾ, ಏನೂ ಕೆಟ್ಟಸುದ್ದಿ ಬರದೇ ಇರಲಿ. ಅಂತ ಹರಕೆನೂ ಹೊತ್ತುಕೊಂಡುಬಿಟ್ಟಳು.

ಆ ಕಡೆಯಿಂದ ಬಹಳ ಸಪ್ಪೆಯ ಧ್ವನಿಯಲ್ಲಿ ''ತಾತಾ, ನಂಗೆ ಇಲ್ಲಿ ತುಂಬಾ ಬೇಜಾರು. ಇಲ್ಲಿ ಯಾರು ನನ್ನನ್ನ ಸರಿಯಾಗಿ ಮಾತಾಡಿಸ್ತಾನೇ ಇಲ್ಲ. ಎಲ್ಲಾರೂ ಸುಮ್ಮ ಸುಮ್ಮನೆ ಬೈತಾರೆ. ನೀನೊಬ್ಬನೇ ಒಳ್ಳೆಯವನು ತಾತಾ. ಅದಕ್ಕೇ ಅಮ್ಮ ಬರದೇ ಹೋದರೂ ನಾನೊಬ್ಬನೇ ರೈಲ್ ಹತ್ತಿ ಬಂದುಬಿಡ್ತೀನಿ. ನೀನು Station ಗೆ ಬಂದು ನನ್ನ ಕರೆದುಕೊಂಡು ಹೋಗ್ತೀಯಾ? ಅಂತ ದೀಪು ಉಸುರಿದಾಗ,

ಎಲ್ಲಿ ಮೊಮ್ಮಗ ಹೇಳಿದ ಹಾಗೇನೇ, ತಾಯಿಗೂ ತಿಳಿಸದೆ ಒಬ್ಬನೇ ಹೊರಟು ಬಂದೇಬಿಡುತ್ತಾನೋ ಅಂತ ಗಾಬರಿಯಾದ ತಾತ, ''ಅಯ್ಯೋ ಇದೇನಪ್ಪಾ ಗ್ರಹಚಾರ, ದೀಪು, ದೀಪುಮರಿ, ಬೇಡಪ್ಪಾ ಹಾಗೆಲ್ಲಾ ಮಾಡಬಾರದು. ಅವರೆಲ್ಲರಿಗೂ ನಿನ್ನ ಕಂಡರೆ ಎಷ್ಟು ಇಷ್ಟ ಅಲ್ವಾ? ಎಲ್ಲೋ ನೀನು ಏನೋ ತಪ್ಪು ಮಾಡಿರಬೇಕು. ಅದಕ್ಕೇ ಒಂದೆರಡು ಮಾತು ಬೈದಿರಬಹುದು. ಹೋದ ತಿಂಗಳು ನೀನು Test ನಲ್ಲಿ 100 ಕ್ಕೆ 95 ಎ, ನಂಬರ್ ತೊಗೊಂಡಿದೀಯಲ್ಲಾ, ಇನ್ನು ಐದು ನಂಬರ್ ಯಾಕೆ ಕಮ್ಮಿ ಆಯಿತು ಅಂತಾ ನಾನೂ ನಿನ್ನ ಬೈದಿರ್ಲಿಲ್ವಾ ಮಗು? ಹಾಗೆಲ್ಲಾ ದೊಡ್ಡವರು ಬೈದರೆ ಕೋಪಿಸ್ಕೊಬಾರದು, ಬೇಜಾರು ಮಾಡಿಕೋಬಾರ್ದು. ಎಲ್ಲಾ ನಿನ್ನ ಒಳ್ಳೇದಕ್ಕೇ ಅಲ್ವಪ್ಪಾ, ಎಲ್ಲಿ ಅಮ್ಮಂಗೆ ಫೋನ್ ಕೊಡು. ನಾನು ಅಮ್ಮಂಗೆ ಚೆನ್ನಾಗಿ ಬೈದು ಬುದ್ಧಿ ಹೇಳ್ತೀನಿ'' ಅಂತ ಒಂದೇ ಉಸಿರಿಗೆ ಬಡಬಡಿಸಿದೆ.

''ಸರಿ ತಾತಾ, ಅಮ್ಮನಿಗೆ ಕೊಡ್ತೀನಿ. ನೀನೇ ಅವಳನ್ನು ಕೇಳು ಹೇಳ್ತಾಳೆ. ನಿಂಗೆ ಆಗ ಗೊತ್ತಾಗುತ್ತೆ'' ಅಂತಾ ಅವರಮ್ಮನ ಕೈಗೆ ದೀಪು ರಿಸೀವರ್ ಕೊಟ್ಟಾಗ ನಾನು ''ವೈಷ್ಣವೀ, ಏನಮ್ಮಾ, ಮಗೂನ ಅಲ್ಲಿ ಕರೆದುಕೊಂಡು ಹೋಗಿ ಯಾಕೆ ಎಲ್ಲಾರೂ ಬೈಯ್ಯುವ ಹಾಗೆ ಮಾಡಿದೀಯಾ. ಪಾಪ, ನಮ್ಮ ದೀಪೂ ಎಷ್ಟು ಒಳ್ಳೇ ಮಗು. ನೋಡಮ್ಮಾ ಈಗಲೇ ನಿಮ್ಮಣ್ಣನಿಗೆ ಹೇಳಿಬಿಡು. ನನ್ನ ಮೊಮ್ಮಗನ ಮನಸ್ಸನ್ನು ಯಾರೂ ನೋಯಿಸಬಾರದು. ನನಗೆ ತುಂಬಾ ನೋವಾಗುತ್ತೆ ನೋಡು''....

''ಅಯ್ಯೋ ಮಾವಯ್ಯ....'' ಅಂತ ಹೇಳಿ ನನ್ನ ಸೊಸೆ ಜೋರಾಗಿ ನಗುವುದಕ್ಕೆ ಶುರುಮಾಡಿದಾಗ, ನಾನು ಕೈಕೈ ಹಿಸುಕಿಕೊಳ್ಳುತ್ತಾ, ಎದುರಿಗೆ ಇವಳು ಇರಬೇಕಾಗಿತ್ತು, ಆಗ... ಆಗ.... ಎಂದು ಹಲ್ಲು ಹಲ್ಲು ಕಡಿದು,

''ಏನಮ್ಮಾ, ಮಗು ಅಷ್ಟು ಬೇಸರಪಟ್ಟುಕೊಂಡಿರುವಾಗ, ನೀನು ನಗತಾ ಇದೀಯಲ್ಲಮ್ಮಾ ನೀನು ಎಂಥಾ ತಾಯಿಯಮ್ಮ. ಅದಕ್ಕೇ ಹೆಣ್ಣು ಮಕ್ಕಳು ತೌರು ಮನೆಗೆ ಹೋಗಿಬಿಟ್ಟರೆ ಹೆಚ್ಚಿಕೊಂಡುಬಿಡ್ತಾರೇಂತ ಹೇಳೋದು.''

''ಮಾವಯ್ಯ.... ನಾನು ನಗತಾ ಇರುವುದು ಯಾಕೆ ಗೊತ್ತಾ ಮಾವಯ್ಯಾ? ಇವತ್ತು ಏನು date ಜ್ಞಾಪಕ ಇದೆಯಾ? ನಿಮ್ಮ ಮೊಮ್ಮಗ ನಿಮ್ಮನ್ನು ಏಪ್ರಿಲ್ ಫೂಲ್ ಮಾಡಿಬಿಟ್ಟನಲ್ಲಾ ಮಾವಯ್ಯ. ಯಾರಿಗೂ ಸೋಲದೆ ಇದ್ದವರು. ಇವತ್ತು ನಿಮ್ಮ ಮೊಮ್ಮಗನ ಕೈಯಲ್ಲಿ ಸೋತುಬಿಟ್ಟರಲ್ಲಾಂತ ನಂಗೆ ನಗೂ ತಡೆಯುವುದಕ್ಕೆ ಆಗಲಿಲ್ಲ. ನೋಡಿ ನಿಮ್ಮ ಮೊಮ್ಮಗ, ಅವರ ಅಪ್ಪನತರಹ ಎಷ್ಟು ಚೆನ್ನಾಗಿ ಸುಳ್ಳು ಹೇಳಿ ಎಲ್ರನ್ನೂ ಫೂಲ್ ಮಾಡ್ತಾನೆ. ಅಲ್ವಾ ಮಾವಯ್ಯ?'' ಅಂತಾ ಇನ್ನೂ ಒಂದಿಷ್ಟು ರೇಗಿಸಿದಳು ಸೊಸೆ.

ಹೌದಲ್ವಾ, ಈ ಮುದಕನಿಗೆ ಏನು ಬಂತು? ಪೇಪರ್ ಕೈಲಿ ಇಟ್ಕೊಂಡು ಮುಖ ಪುಟದಲ್ಲೇ, ಏಪ್ರಿಲ್ ಫೂಲ್ ಆದ ಒಬ್ಬ ಮಹಾಶಯನ ಬಗ್ಗೆಯೇ ಓದುತ್ತಾ ಇದ್ದರೂ, ಈ ನನ್ನ ಮರಿ ಕೈಯಲ್ಲಿ ನಾನೂ ಸೋತು, fool ಆಗಿಬಿಟ್ಟೆನಲ್ಲಾ.

''ಹೋಗ್ಲಿ ಬಿಡಮ್ಮಾ ಎಷ್ಟಾದ್ರೂ ಅವನು ನನ್ನ ಮೊಮ್ಮಗ ಅಲ್ವಾ, ರಸಿಕ, ಗಟ್ಟಿಗ ನನ್ನ ಹಾಗೇನೇ'' ಬಿದ್ರೂ ಮೀಸೆ ಮಣ್ಣಾಗಲಿಲ್ಲಾಂತ ಹೇಳ್ತಾರಲ್ಲಾ ಹಾಗೆ, ನಾನು ಉತ್ತರಿಸಿ ರಿಸೀವರ್ ಕೆಳಗಿಟ್ಟು ಸುಧಾರಿಸಿಕೊಳ್ಳುತ್ತಾ ನಗಲಾರಂಭಿಸಿದಾಗ, ನನ್ನಾಕೆ ಹತ್ತಿರ ಬಂದು, ''ಇದೇನ್ರಿ ಇವತ್ತು ನಿಮ್ಮನ್ನು ಅರ್ಥಮಾಡ್ಕೊಳ್ಳೋಕೇ ಆಗ್ತಿಲ್ಲಾ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಏನೋ ರೇಗಾಡ್ತಿದ್ರಿ. ಈಗ ಏನೋ ನಗ್ತಾ ಇದೀರಾ. ಬಿ.ಪಿ., ಗೀಪಿ ಏನಾದ್ರೂ ಏರು ಪೇರಾಗಿದ್ಯಾ? ಡಾಕ್ಟರ್‌ಗೆ ಫೋನ್ ಮಾಡಲಾ... ಅಂದಾಗ,

ನಾನು ಪುನಃ ಜೋರಾಗಿ, ಮನಸಾರ ನಕ್ಕು, ''ಬಾರೇ, ಕೂತ್ಕೋ ಬಾ ಇಲ್ಲಿ ಹೇಳ್ತೀನಿ ಇವತ್ತು ನಿನ್ನ ಮೊಮ್ಮಗ ನನ್ನ ಫೂಲ್ ಮಾಡ್ಬಿಟ್ಟ ಕಣೆ. ಇವತ್ತು ಏಪ್ರಿಲ್ ಫಸ್ಟ್ ಅಲ್ವಾ, ನಿನ್ನ ಒಬ್ಬಳ ಕೈಯಲ್ಲಿ ನಾನು ಬುದ್ಧಿಯಿಲ್ಲದವನು ಅಂತಾ ಅನ್ನಿಸಿಕೊಂಡಿದ್ದೆ ಇಷ್ಟು ದಿವಸ. ಇವತ್ತು ನಿನ್ನ ಮೊಮ್ಮಗನೂ ನನ್ನ ಬುದ್ಧಿಯಿಲ್ಲದವನು ಅಂತ ಅಂದುಬಿಟ್ಟ'' ಅಂತ ಹೇಳಿ ನನ್ನ ಸೋಲನ್ನು ಸಂತೋಷವಾಗಿ ಒಪ್ಪಿಕೊಂಡು ನನ್ನ ದಿನಚರಿಯನ್ನು ಸಂತೋಷವಾಗಿ ಪ್ರಾರಂಭಿಸಿದೆ.

★★★

ಕಾಲಿಗೆ ಬುದ್ಧಿ ಹೇಳಿದೆ

– ಎಂ.ಎನ್. ಜಯಕೇಸರಿ

ಬದಲಾವಣೆಗೆಂದು ಈ ದಿನ ಮಾರ್ನಿಂಗ್ ವಾಕಿಂಗ್ ಹೋದಾಗ, 7ನೆಯ ಬ್ಲಾಕ್ ಕಡೆಗೆ ಹೊರಟು ಮೂರನೆಯ ತಿರುವಿನಲ್ಲಿ ಎಡಗಡೆಗೆ ತಿರುಗಿದೆ. ಬಲಗಡೆಯ ಐದನೇ ಮನೆಯ ಮುಂದಿದ್ದ ಕರಿಯ ಬೋರ್ಡು ನನ್ನ ಗಮನ ಸೆಳೆಯಿತು. ಬೋರ್ಡಿನ ಮೇಲೆ ಬಿಳಿಯ ಬಣ್ಣದಲ್ಲಿ 'ಭಯಂಕರ ರಾವ್' ಎಂದೂ, ಕೆಂಪು ಬಣ್ಣದಲ್ಲಿ 'ಸಾಹಿತಿ' ಎಂದೂ ಬರೆದಿತ್ತು. ಹಾಗೆಯೇ ಮನೆಯ ಗೇಟಿನ ಮೇಲೆ 'ನಾಯಿ ಇದೆ ಎಚ್ಚರಿಕೆ' ಎಂಬ ಬೋರ್ಡೂ ಇತ್ತು. ಸಾಹಿತಿ ಎಂದೊಡನೆಯೇ ಯಾರೂ ಹೋಗಲು ಧೈರ್ಯ ಮಾಡುವುದಿಲ್ಲ. ಅಂದಮೇಲೆ ಎರಡನೆಯ ಬೋರ್ಡಿನ ಅವಶ್ಯಕತೆ ಏನಿತ್ತು, ಎಂದು ಯೋಚಿಸುತ್ತಿರುವಾಗಲೇ, 'ಅರೇ, ಇದೇನು ನೀವು ಇಲ್ಲಿ!' ಎಂಬ ಹೆಣ್ಣು ಧ್ವನಿ ಕೇಳಿಸಿ, ತಲೆ ಎತ್ತಿ ನೋಡಿದೆ.

ಗುರುತು ಸಿಕ್ಕಿತು. 'ನೀವು ಮಿಸ್ಸೆಸ್ ಶಂಕರ್ ಅಲ್ಲವೆ, ತುಮಕೂರಿನಲ್ಲಿದ್ದಿರಲ್ಲಾ' ಎಂದೆ.

'ಹೌದು, ಇಲ್ಲಿಗೆ ಬಂದು ಎರಡು ತಿಂಗಳು ಆಯಿತು. ಬನ್ನಿ ಒಳಗೆ, ಅವರೂ ಇದ್ದಾರೆ' ಎಂದು, ನನ್ನ ಗಮನ ಗೇಟಿನ ಬೋರ್ಡಿನ ಕಡೆಗೆ ಹರಿದಿದ್ದನ್ನು ನೋಡಿ, 'ಹೆದರಬೇಡಿ, ಒಳಗೆ ಕಟ್ಟಿಹಾಕಿದ್ದೇವೆ' ಎಂದರು.

ಅವರನ್ನು ನಾನು ಹಿಂಬಾಲಿಸಿದೆ. ಗೇಟು ದಾಟಿ, ಮನೆಯ ಹೊಸ್ತಿಲ ಬಳಿ ಬರುತ್ತಿದ್ದಂತೆಯೇ. 'ಹುಷಾರಾಗಿ ಬನ್ನಿ' ಎಂದು ಎಚ್ಚರಿಸಿದರು. ಹಾಗೆ ಅವರು ಎಚ್ಚರಿಸಿದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದರೆ, ನನ್ನ ಕಾಲ ಬಳಿಯಿದ್ದ ಸರಪಳಿಯನ್ನು ಕಾಣದೇ ಎಡವಿ, ಮುಂದಿದ್ದ ಗೋಡೆಗೆ ನನ್ನ ತಲೆ ಬಡಿದು, ಅನಾಹುತ ಆಗುವುದು ತಪ್ಪಿಸಿದಲ್ಲದೇ, ಜೊತೆಗೇ, ಸರಪಳಿಯಿಂದ ಬಂಧಿಸಿದ್ದ ಪುಟ್ಟ ನಾಯಿಮರಿಗೆ ಮೋಕ್ಷವನ್ನು ಕೊಡಿಸುವುದನ್ನೂ ತಪ್ಪಿಸಿದ್ದರು.

ರೂಮಿನಿಂದ ಬಂದ ಆಕೆ ನನ್ನನ್ನು ಕುರಿತು, 'ಒಳಗಿದ್ದಾರೆ ಹೋಗಿ, ಅಷ್ಟರಲ್ಲಿ ಕಾಫಿ ತರುತ್ತೇನೆ' ಎಂದು ಅಡಿಗೆ ಮನೆ ಕಡೆ ಇರಬೇಕು, ಆ ಕಡೆಗೆ ಹೋದರು.

ರೂಮಿನ ಒಳಗಡೆ ಟೇಬಲ್ಲಿನ ಮೇಲೆ ಬಿಳಿ ಹಾಳೆಗಳು, ಪಕ್ಕದಲ್ಲಿ ಒಂದು ಟೈಪ್‌ರೈಟರ್, ಅದರ ಪಕ್ಕದಲ್ಲಿ ಹಲವಾರು ವರ್ತಮಾನ ಪತ್ರಿಕೆಗಳು ಹರಡಿದ್ದವು. ಮಾಮೂಲಿನಂತೆ ಕಾಲ ಬುಡದಲ್ಲಿ ಕ.ಬು., ಮುಂದೆ ಸಾಹಿತಿ!

ಮನೆಯಾಕೆ ಪರಿಚಯ ಹೇಳಿದ್ದರೆಂದು ತೋರುತ್ತದೆ, ತಲೆ ಎತ್ತದೇ 'ಒಳಗೆ ಬನ್ನಿ ಸ್ವಾಮಿ, ಬಹಳ ದಿನ ಆಯಿತು. ಚೆನ್ನಾಗಿದ್ದೀರಾ?' ಎಂದು ಸ್ವಾಗತಿಸಿದರು, ಸಾಹಿತಿಗಳು. ತಮ್ಮ ಪಕ್ಕದಲ್ಲಿ ಕುರ್ಚಿ ತೋ(ಕೂ)ರಿಸಿದರು. ಹಳೆಯ ದಿನಗಳನ್ನು ನೆನಸಿಕೊಂಡು ಸಂತೋಷ ಪಡುತ್ತಿದ್ದಂತೆಯೇ, ಆಕೆ ಕಾಫಿಯನ್ನು ತಂದಿತ್ತರು.


'ಬಹಳ ದಿನಗಳಾದ ಮೇಲೆ ಬಂದಿದ್ದೀರಿ, ಟಿಫಿನ್ ರೆಡಿ ಮಾಡುತ್ತೇನೆ, ಮುಗಿಸಿಕೊಂಡು ಹೋಗಿ!' ಎಂದು ಅಡಿಗೆ ಮನೆಗೆ ಹೊದರು. ಅವರ ಪ್ರೀತಿಯ ಒತ್ತಾಯಕ್ಕಾಗಿಯೋ, ಇಲ್ಲಾ ಹೆಂಡತಿ 'ಮಾಡಿಟ್ಟಿರುತ್ತೇನೆ' ಎಂಬ ಉಪ್ಪಿಟ್ಟಿನ ಹೆದರಿಕೆಗೋ ಏನೋ, ಅಲ್ಲಿಯೇ ಕುಳಿತೆ.

ನಂತರ, ಸಾಹಿತಿಯನ್ನು ಕುರಿತು ''ಏನು ಬರೆಯುತ್ತಿದ್ದೀರಿ'' ಎಂದು ಪ್ರಶ್ನಿಸಿದೆ.

'ಸಿನಿಮಾ, ಅಂದರೆ ಚಿತ್ರದ ಕಥೆ ಬರೆಯುತ್ತಿದ್ದೇನೆ' ಎಂದರು.

'ಚಿತ್ರದ ಕಥೆ!' ಆಶ್ಚರ್ಯ ವ್ಯಕ್ತಪಡಿಸಿದೆ.

'ಹೌದು, ಪೆನ್ನಿನಲ್ಲಿ ಬರೆಯುತ್ತಿದ್ದೇವೆ' ಎಂದರು.



ಚೆನ್ನೈನಲ್ಲಿ ಚುನಾವಣೆ ಫಲಿತಾಂಶ ಬಂತೂ ಅಂತ
ನಮ್ಮೆಜಮಾನ್ರು, ನನಗೆ ಒಂದು ಕೇಪ್ ಪ್ರೆಸೆಂಟ್
ಮಾಡಿದ್ರೂರೀ, ಎಂಥ ನಾಚಿಗ್ಗೇಡು ರೀ...

ಕರ್ಮ! ಪೆನ್ನಿನಲ್ಲಿ ಬರೆಯುವುದರಿಂದ ಶಾಶ್ವತವಾಗಿ ಉಳಿದು ಅದು ಪ್ರಿಂಟ್ ಆಗಿ ಓದುಗರಿಗೆ ತಲೆನೋವು ತರುತ್ತದೆ. ಒಂದು ವೇಳೆ ಪೆನ್ಸಿಲ್‌ನಲ್ಲಿ ಬರೆದಿದ್ದರೆ, ಸಾಹಿತಿಗಳ ಮಕ್ಕಳು (ಇದ್ದರೆ) ಅದನ್ನು ರಬ್ಬರಿನಿಂದ ಅಳಿಸಿ, ಯಾವುದಾದರು ಉಪಯುಕ್ತವಾದದ್ದನ್ನು ಬರೆದಿಡುತ್ತಿದ್ದರು, ಎಂದುಕೊಳ್ಳುವುದರಲ್ಲಿಯೇ 'ಈ ಪೆನ್ನಿನಲ್ಲಿ ಬರೆಯುತ್ತಿದ್ದೇನೆ' ಎಂದು ಪುಟ್ಟ ಕೊಳಲಿನಂತಿರುವ ವಸ್ತುವನ್ನು ತೋರಿಸಿದರು.

'ಈ ಪೆನ್ನಿನ ವಿಶೇಷ ಏನು ಅನ್ನುತ್ತೀರಾ?' ಉತ್ತರಕ್ಕೆ ಕಾಯದೇ, ಮುಂದುವರೆದರು, ಸಾಹಿತಿಗಳು, 'ಈ ಪೆನ್ನಿಗೆ ಒಂಭತ್ತು ರಂಧ್ರಗಳಿವೆ. ಒಂದೊಂದು ರಂಧ್ರದಿಂದಲೂ ಒಂದೊಂದು ಬಣ್ಣ ಹೊರಬರುತ್ತದೆ. ಒಂದೊಂದು ಬಣ್ಣವೂ ಒಂದೊಂದು ರಸವನ್ನು ಪ್ರತಿಬಿಂಬಿಸುತ್ತದೆ. ಇದರಿಂದ, ಸಿನೆಮಾದ ಡೈರೆಕ್ಟರಿಗೆ ಸಹಾಯವಾಗುತ್ತದೆ. ಇಲ್ಲಿ ನೋಡಿ ಎಂದು ಒಂದು ಕಾಗದವನ್ನು ತೋರಿಸಿದರು. ಕೆಲವು ವಾಕ್ಯಗಳು ಬೇರೆ ಬೇರೆ ಬಣ್ಣಗಳಲ್ಲಿದ್ದವು. ಆ ಕಾಗದದ ಹೆಚ್ಚು ಭಾಗವು ಒಂದೇ ಬಣ್ಣದಲ್ಲಿ ಬರೆಯಲಾಗಿತ್ತು. ಬಹುಶಃ ಕರವಸ್ತ್ರಾರ್ದ್ರವ ರಸವಿರಬಹುದೇನೋ!

ಟೇಬಲ್ಲಿನ ಮೇಲಿದ್ದ ಪೇಪರ್‌ಗಳ ಕಡೆಗೆ ಗಮನ ಸೆಳೆದ. ''ಸಾಹಿತಿಯಾದವನಿಗೆ ಪ್ರಚಲಿತ ವಿದ್ಯಮಾನಗಳ ಪರಿವೆ ಇರಬೇಕು. ಇಲ್ಲದಿದ್ದರೆ ಕಥೆ ಕಟ್ಟುಕಥೆಯಾಗುತ್ತದೆ. ಓದುಗರು ನಮ್ಮನ್ನು ನಂಬುವುದಿಲ್ಲ. ಈಗ ನಮ್ಮ ಚಿತ್ರದ ಕತೆಯನ್ನೇ ತೆಗೆದುಕೊಳ್ಳಿ, ನಮ್ಮ ಚಿತ್ರಕಥೆಗೆ ನಾಯಕಿ ಪ್ರಾಧಾನ್ಯ (ಮಹಿಳಾವರ್ಷ!). ನಾಯಕಿಯ ತಾಯಿಗೆ ಒಂದೇ ತರಹ ಇರುವ ನಾಲ್ಕು ಮಕ್ಕಳು (ನಾಯಕಿ ನಟಿಗೆ ನಾಲ್ಕು ಪಾತ್ರ!). ಪ್ರೇಕ್ಷಕರು ನಂಬುತ್ತಾರಾ? ಇಲ್ಲಿ ನೋಡಿ, ಎಂದು ಪೇಪರ್‌ಕಟಿಂಗ್‌ಗಳನ್ನು ಹುಡುಕಿ ಒಂದನ್ನು ತೋರಿಸಿದರು. ಒಬ್ಬ ಮಹಿಳೆಯು ನಾಲ್ಕು ಮಕ್ಕಳಿಗೆ ಜನ್ಮವಿತ್ತ ವಿವರವಿತ್ತು. ಮುಂದೆ ಕೇಳಿ. ''ನಾಲ್ವರು ಒಂದೇ ಕಡೆ ಆಡುತ್ತಿರುವಾಗ ಭೂಕಂಪವಾಗುತ್ತದೆ'' ಎಂದು ಪೇಪರ್ ಕಟಿಂಗ್ ಹುಡುಕಲು ತೊಡಗಿದಾಗ ನಾನೇ ಹೇಳಿದೆ. ''ಹೌದು, ಪೇಪರಿನಲ್ಲಿ ಓದಿದ್ದೇನೆ.'' ''ಆದರೆ ಈ ಭೂಕಂಪ ಇಪ್ಪತ್ತು ವರ್ಷದ ಹಿಂದೆ ಆಗಿದ್ದು.'' ''ಹೌದು ಬಿಡಿ, ಈ ಭೂಕಂಪಗಳು ಆಗುತ್ತಲೇ ಇರುತ್ತವೆ, ಇಪ್ಪತ್ತು ವರ್ಷಗಳ ಹಿಂದೆಯೂ ಆಗಿರುತ್ತದೆ. ಆಗಿನ ಪೇಪರ್‌ಗಳಲ್ಲೂ ಬಂದಿರುತ್ತವೆ. ಈ ಕಥೆನಾ ಚಿತ್ರತೆಗಿತೀರಾ?'' ನಾನು ಕೇಳಿದೆ. ''ಇಲ್ಲಪ್ಪಾ. ಈ ಕಥೆಗಳನ್ನು ನಮ್ಮದೇ ಒಂದು ಕಥಾವಿಭಾಗ ಇದೆ, ಕಲ್ಪನಾವಿಲಾಸ ಚಿತ್ರಕಥಾ ಸಿಂಡಿಕೇಟ್ ಅಂತ. ಅದಕ್ಕೆ

ಒಪ್ಪಿಸುತ್ತೇನೆ. ಅವರು ಬೇರೆ ಭಾಷೆ ನಿರ್ಮಾಪಕರಿಗೆ ಕಥೆಯನ್ನು ಕೊಡುತ್ತಾರೆ. ಅವರು ಚಿತ್ರ ನಿರ್ಮಿಸಿ, ಆ ಚಿತ್ರ ಯಶಸ್ವಿ ಆದಮೇಲೆ ಅದನ್ನು ಕನ್ನಡ ನಿರ್ಮಾಪಕರು ಕನ್ನಡಕ್ಕೆ ರೀಮೇಕ್ ಮಾಡುತ್ತಾರೆ. ಹೀಗೆ ನಮಗೆ ಎರಡು ಕಡೆಯಿಂದ ಹಣ ಸಿಗುತ್ತದೆ.''

'ಚೆನ್ನಾಗಿದೆ' ಎಂದೆ. 'ಮುಂದೆ ಇನ್ನೂ ಚೆನ್ನಾಗಿದೆ, ಕೇಳಿ' ಎಂದರು (ಪಾಪ, ಚೆನ್ನಾಗಿದೆ ಎಂದದ್ದು ಕಥೆಯನ್ನು ಕುರಿತು ಎಂದುಕೊಂಡಿದ್ದಾರೆ!)

''ಏನು ಹೇಳುತ್ತಿದ್ದೆ? ಆಂ, ನಾಲ್ಕು ಹುಡುಗಿಯರು ಆಡುತ್ತಿದ್ದಾಗ ಭೂಕಂಪವಾಗುತ್ತದೆ. ಅನೇಕರು ಮನೆ ಮಠ, ತಂದೆ ತಾಯಿ, ಅಕ್ಕತಂಗಿ, ಅಣ್ಣತಮ್ಮಂದಿರನ್ನು ಕಳೆದುಕೊಳ್ಳುತ್ತಾರೆ. ಅದೇ ರೀತಿ ಈ ನಾಲ್ಕು ಹುಡುಗಿಯರೂ ಎಲ್ಲವನ್ನೂ ಕಳೆದುಕೊಂಡು, ಬೇರೆ ಬೇರೆಯಾಗುತ್ತಾರೆ. ಒಬ್ಬಳು ಒಬ್ಬ ಲಾಯರ್ ದಂಪತಿಗಳಿಗೆ ಸಿಗುತ್ತಾಳೆ. ಅವಳನ್ನು ಓದಿಸಿ, ದೊಡ್ಡ ಅಡ್ವೋಕೇಟ್ ಮಾಡುತ್ತಾರೆ. ಎರಡನೆಯವಳು ಒಬ್ಬ ರತ್ನ ವ್ಯಾಪಾರಿಗೆ ಸಿಕ್ಕು, ಅವಳನ್ನು ಓದಿಸಿ ಅವರದೇ ಆದ ಸಂಸ್ಥೆಯಲ್ಲಿ ಮ್ಯಾನೇಜರ್ ಮಾಡಿರುತ್ತಾರೆ. ಮೂರನೆಯವಳು ಒಬ್ಬ ಪೋಲಿಸ್ ಅಧಿಕಾರಿಗೆ ಸಿಕ್ಕು,''

'ಅವಳನ್ನು ಓದಿಸಿ ಪೋಲೀಸ್ ಇನ್‌ಸ್ಪೆಕ್ಟರ್ ಮಾಡುತ್ತಾರೆ' ನಾನೆಂದೆ.

'ಕರೆಕ್ಟ್' ಎಂದರು.

ಸಾಹಿತಿಯು 'ನಾಲ್ಕನೆಯವಳು' ಎಂದು ಮುಂದುವರೆಸುವ ಮೊದಲೇ 'ದೊಡ್ಡ ರೌಡಿಯಾಗುತ್ತಾಳೆ' ಎಂದೆ ನಾನು.

ಇಲ್ಲಾ, ಅವಳು ಒಬ್ಬ ಪುರೋಹಿತರಿಗೆ ಸಿಕ್ಕಿ ಒಳ್ಳೆಯ ದೈವಭಕ್ತಳಾಗುತ್ತಾಳೆ.

ಚಿತ್ರಕಥೆ ಬರೆಯುವುದು ನಾನೆಂದುಕೊಂಡಷ್ಟು ಸುಲಭವಲ್ಲ.

'ಮೂರೂ ಹುಡುಗಿಯರಿಗೂ ಮದುವೆಯಾಗಿರುತ್ತದೆ' ಸಾಹಿತಿಗಳು ಮುಂದುವರೆಸಿದರು. 'ನಾಲ್ಕನೆಯವಳಿಗೆ ಒಬ್ಬ ಪ್ರೇಮಿಯಿರುತ್ತಾನೆ. ಈ ನಾಲ್ಕನೇ ಹುಡುಗಿ ಮತ್ತು ಅವಳ ಪ್ರೇಮಿಯಿಂದ ನಾಲ್ಕೂ ಹುಡುಗಿಯರು ಒಂದಾಗುತ್ತಾರೆ.'

'ಹೇಗೆ ಎಂದು ಕೇಳಿ' ಸಾಹಿತಿಗಳು ಹೇಳಿದರು.

ಟಿಫಿನ್‌ಗಾಗಿ ಕುಳಿತಿದ್ದು ಮೊದಲನೆಯ ತಪ್ಪು, ಸಾಹಿತಿ ಏನು ಬರೆಯುತ್ತಿದ್ದಾರೆ ಎಂದು ಕುತೂಹಲ ವ್ಯಕ್ತಪಡಿಸಿದ್ದು ಎರಡನೆಯ ತಪ್ಪು. ಪಶ್ಚಾತ್ತಾಪ ಪಟ್ಟು ಪ್ರಯೋಜನವಿಲ್ಲ.

'ಯಾಕೆ ಸುಮ್ಮನೆ ಕುಳಿತಿರಿ, ಕೇಳ್ರಿ ಇಲ್ಲಿ' ಎಂದು ಛಲ ಬಿಡದ ತ್ರಿವಿಕ್ರಮನಂತೆ ಕಥೆ ಹೇಳತೊಡಗಿದರು. 'ಒಂದೊಂದು ಕಾರಣಕ್ಕಾಗಿ ಮೊದಲಿನ ಮೂವರು ತಮ್ಮ ಬಾಲ್ಯದಲ್ಲಿ ಭೂಕಂಪವಾದ ಊರಿಗೆ ಬಂದಿರುತ್ತಾರೆ. ಕಾರಣಗಳನ್ನು ತಿಳಿಸಿದರೆ ಕಥೆಯಲ್ಲಿನ ಸಸ್ಪೆನ್ಸ್ ಹೊರಟುಹೋಗುತ್ತದೆ. ಆದ್ದರಿಂದ ಹೇಳುವುದಿಲ್ಲ'' (ಹಾಯ್, ಪೂರ್ತಿ ಕಥೆ ಸಸ್ಪೆನ್ಸ್ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು!) ಮುಂದುವರೆಸಿದರು. ''ನಾಲ್ಕನೆಯವಳಿಗೆ ಆಗಾಗ ತಮ್ಮ ಬಾಲ್ಯದಲ್ಲಿ ಭೂಕಂಪವಾದ ಊರು, ಭೂಕಂಪ, ಕನಸಿನಲ್ಲಿ ಬರುತ್ತಿರುತ್ತದೆ (ಫ್ಲಾಷ್‌ಬ್ಯಾಕ್!). ಎಚ್ಚರಗೊಂಡಾಗ ಮೈಯೆಲ್ಲ ಬೆವರಿರುತ್ತದೆ. ಅವಳ ಪ್ರೇಮಿ ಒಬ್ಬ ಸೈಕಾಲಜಿಸ್ಟ್ ಮತ್ತು ಅಸ್ಟ್ರಾಲಜರ್. ಅವಳ ಕನಸಿಗೆ ಕಾರಣವನ್ನು ತಿಳಿಯುತ್ತಾನೆ. ಎಲ್ಲರನ್ನೂ ಒಂದುಗೂಡಿಸುವುದಕ್ಕಾಗಿ ಒಂದು ಉಪಾಯ ಮಾಡುತ್ತಾನೆ. ಯಾರಿಗಾದರು ತಲೆಗೆ ಏಟು ಬಿದ್ದು ನೆನಪಿನ ಶಕ್ತಿ ಹೋಗಿದ್ದರೆ, ಪುನಃ ತಲೆಗೆ ಪೆಟ್ಟು ಬಿದ್ದು ನೆನಪು ಮರುಕಳಿಸುವಂತೆ, ಅವಳನ್ನು ಭೂಕಂಪವಾಗುವ ಜಾಗಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ ಎಂದು ತಿಳಿಸುತ್ತಾನೆ.'' ಇದೇ ದಿನ ಭುಜ್‌ನಲ್ಲಿ ಭೂಕಂಪ ಆಗುವುದನ್ನು ತಿಳಿದು ಆ ದಿನ ಅವಳನ್ನು ಭುಜ್‌ಗೆ ಕರೆದುಕೊಂಡು...

ಕಥೆಗೆ ಕಾಲಿಲ್ಲ, ನಿಜ. ನನಗೆ ಎರಡು ಇವೆ. ಮೆಲ್ಲಗೆ ಕಾಲಿಗೆ ಬುದ್ಧಿ ಹೇಳಿದೆ.



ಕಂಪ್ಯೂಟರ್ ಗಾದೆಗಳು

– ಎಂ.ಎಸ್.ಕೆ.

(ಎಲ್ಲಾ ಇಂಟರ್‌ನೆಟ್ ನಿಂದಾನೇ)

1. ಎಲ್ಲಾರ ಮನೆ ದೋಸೇನೂ ತೂತು
- ಎಲ್ಲಾ ಪ್ರಾಜೆಕ್ಟ್ಸ್ ಅಲ್ಲೂ ಬಗ್ಸ್

2. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
- ಮೇನ್ ಫ್ರೇಂಗೊಂದು ಕಾಲ, E ಕಾಮರ್ಸ್‌ಗೊಂದು ಕಾಲ

3. ಅಡುಗೆ ಮಾಡೋರಿಗಿಂತ ಬಡಿಸಿದೋರ್ದ್ದೇ ಜೋರು
- ಕೋಡಿಂಗ್ ಮಾಡಿದೋನಿಗಿಂತ ಟೆಸ್ಟ್ ಮಾಡಿದೋಂದೇ ಜೋರು

4. ರಾತ್ರೀಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ರಾಮನಿಗೂ ಸೀತೆಗೂ ಸಂಬಂಧ ಏನೂಂತ ಕೇಳೋದೇ
- ಪ್ರಾಜೆಕ್ಟ್ ಎಲ್ಲಾ ಮಾಡಿದ ಮೇಲೆ ಈ ಪ್ರಾಜೆಕ್ಟ್ ಯಾವುದರ ಮೇಲೇಂತ ಕೇಳೋದಾ?

5. ಕೈ ಕೆಸರಾದರೆ ಬಾಯಿ ಮೊಸರು
- ಕೀ ಬೋರ್ಡಿನ ಮೇಲೆ ಕೈ ಓಡಿಸಿದರೆ ಬಾಯಿಗೆ ಕಿಂಗ್‌ಫಿಷರ್ ಬೀರು

6. ಮಂತ್ರಕ್ಕಿಂತ ಉಗುಳೇ ಜಾಸ್ತಿ
- ಕೋಡಿಂಗ್‌ಗಿಂತ ಡಾಕ್ಯುಮೆಂಟೇಶನ್ನೇ ಜಾಸ್ತಿ

7. ಎತ್ತಿಗೆ ಜ್ವರ - ಎಮ್ಮೆಗೆ ಬರೆ
- ಒಂದೂ ಮಾಡ್ಯೂಲಲ್ಲಿ ಬಗ್ ಇದ್ರೆ ಇನ್ನೊಂದು ಮಾಡ್ಯೂಲ್ ಡೀ ಬಗ್ ಮಾಡಿದ್ರಂತೆ

8. ಕೂಸು ಹುಟ್ಟೋ ಮೊದಲೆ ಕುಲಾವಿ ಹೊಲಿಸಿದರು
- ಫಾರಿನ್ ಆಫರ್ ಸಿಕ್ಕೋ ಮೊದಲೇ ಶಾಪಿಂಗ್ ಮಾಡಿದ್ನಂತೆ

9. ಹುಚ್ಚನ ಮದುವೇಲಿ ಉಂಡೋನೇ ಜಾಣ
- ವಾಕ್ ಇನ್ ಇನ್ಟರ್‌ವ್ಯೂ ಅಲ್ಲಿ ಕೆಲಸ ಗಿಟ್ಟಿಸಿದೋನೇ ಜಾಣ

10. ಗಡ್ಡಕ್ಕೆ ಬೆಂಕಿ ಹತ್ತಿಕೊಂಡಾಗ ಭಾವೀ ತೋಡಿದನಂತೆ

- ಕ್ಲೈಂಟ್‌ನ ಮುಂದೆ ಕೂಡಿಸಿಕೊಂಡು ಕೋಡಿಂಗ್ ಶುರು ಮಾಡೋದಾ?

11. ಕಡೆಗೆಣಿಸಿದ ಕಿಡಿ ಮನೇನೇ ಸುಟ್ಟಿತು

- ಕಡೆಗೆಣಿಸಿದ ಬಗ್ಗು ಸಿಸ್ಟಂನೇ ಕ್ರಾಷ್ ಮಾಡ್ತು

12. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು

- ಸಾವಿರ ಸುಳ್ಳು ಹೇಳಿ ಒಂದು IT ಕೆಲಸ ಗಿಟ್ಟಿಸಿಕೋ

13. ಇಲಿಯಾಗಿ ನೂರು ದಿನ ಬದುಕೋದಿಕ್ಕಿಂತ, ಹುಲಿಯಾಗಿ ಮೂರು ದಿನ ಬದುಕೋದು ಲೇಸು

- ಬೆಂಗಳೂರಿನಲ್ಲಿ ನೂರು ದಿನ ದುಡಿಯೋದಕ್ಕಿಂತ ಕ್ಯಾಲಿಫೋರ್ನಿಯಾದಲ್ಲಿ ಮೂರುದಿನ ದುಡಿಯೋದು ಲೇಸು.

14. ಕುಂಬಾರನಿಗೆ ವರುಷ, ದೊಣ್ಣೇಗೆ ನಿಮಿಷ

- ಪ್ರೋಗ್ರಾಮರ್‌ಗೆ ವರುಷ, ಪ್ರಾಜೆಕ್ಟ್ ಮ್ಯಾನೇಜರ್ಗೆ ನಿಮಿಷ

15. ಶಿವಪೂಜೇಲಿ ಕರಡಿ ಬಂದ ಹಾಗೆ

- ಇನ್ಟರ್‌ನೆಟ್ ಸರ್ಫ್ ಮಾಡ್ತಾ ಇರ್‍ಬೇಗ ಮ್ಯಾನೇಜರ್ ಬಂದಹಾಗೆ

16. ಯಥಾ ರಾಜಾ, ತಥಾ ಪ್ರಜಾ

- ಮ್ಯಾನೇಜರ್ ಹೆಂಗೋ ಪ್ರೋಗ್ರಾಮರ್ರೂ ಹಂಗೇ

17. ಅಡಿಕೇಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ

- ಬಾಡೀ ಶಾಪರ್ ಇಂದ ಹೋದ ಮಾನ ಲಕ್ಷ ಕೊಟ್ಟರೂ ವಾಪಸ್ ಬರಲ್ಲ

18. ಕರೆದು ಹೋಳಿಗೆ ಕೊಟ್ಟರೆ ತುಪ್ಪ ಎಲ್ಲೀಂತ ಕೇಳಿದನಂತೆ

- ಕರೆದು ಮಗಳನ್ನ ಕೊಡುತ್ತೀನಿ ಅಂದರೆ ''ನನಗೆ ಸಾಫ್ಟ್‌ವೇರ್ ಇಂಜಿನಿಯರ್ರೇ ಬೇಕು'' ಅಂದನಂತೆ

19. ಬೆಳ್ಳಗಿರೋದೆಲ್ಲಾ ಹಾಲಲ್ಲ

- ಮೈಕ್ರೋಸಾಫ್ಟ್ ಮಾಡಿದ್ದೆಲ್ಲಾ ಚೆನ್ನಾಗಿರೋದಿಲ್ಲಾ

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR